ಕರ್ನಾಟಕ ವಿಧಾನ ಪರಿಷತ್ತು



ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗೆ,ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳ ಹುದ್ದೆಗೆ, ಪ್ರೌಢ ಶಾಲಾ ಸಹಶಿಕ್ಷಕರ ಹುದ್ದೆಯಿಂದ ಪ್ರೌಢಶಾಲಾ ಮುಖ್ಯ ಶಿಕ್ಷಕರ ಹುದ್ದೆಗೆ, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಯಿಂದ ಪ್ರಾಂಶುಪಾಲರ ಹುದ್ದೆಗೆ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯಿಂದ ಮುಖ್ಯೋಪಾಧ್ಯಾಯರ ಹುದ್ದೆಗೆ ಹಾಗೂ ಮುಖ್ಯೋಪಾಧ್ಯಾಯರ ಹುದ್ದೆಯಿಂದ ಹಿರಿಯ ಮುಖ್ಯ ಶಿಕ್ಷಕರ ಹುದ್ದೆಗೆ ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ವಿದ್ಯಾರ್ಹತೆ ಹಾಗೂ ಜೇಷ್ಠತೆಯ ಆಧಾರದ ಮೇಲೆ ಪದೋನ್ನತಿ ಪಡೆದಿರುವ ಕಾರಣದಿಂದಾಗಿ ಆರ್ಥಿಕ ಇಲಾಖೆ ಹಾಗೂ ಇನ್ನಿತರ ಇಲಾಖೆಗಳ ಸರ್ಕಾರಿ ಆದೇಶಗಳನ್ವಯ 10,15,20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿಗಳು (10 ವರ್ಷಗಳ ಕಾಲಮಿತಿ, 15 ವರ್ಷಗಳ ಸ್ವಯಂ ಚಾಲಿತ, 20 ವರ್ಷಗಳ 1ನೇ ಹೆಚ್ಚುವರಿ, 25 ವರ್ಷಗಳ 2ನೇ ಹೆಚ್ಚುವರಿ, 30 ವರ್ಷಗಳ 3ನೇ ಹೆಚ್ಚುವರಿ ವೇತನ ಮುಂಬಡ್ತಿಗಳು) ಸಿಗದ ಕಾರಣ, ಪದೋನ್ನತಿ ಶಿಕ್ಷಕರ ಹಾಗೂ ಪದೋನ್ನತಿ ಪಡೆಯದೆ 10,15,20,25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿಗಳನ್ನು ಪಡೆದಿರುವ ಶಿಕ್ಷಕರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯವನ್ನು ಸರಿಪಡಿಸುವ ಸಲುವಾಗಿ ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಮಧ್ಯಂತರ ವರದಿ.

ವಿಧಾನ ಪರಿಷತ್ತಿಗೆ ಮಂಡಿಸಿದ ದಿನಾಂಕ: 22.09.2026


ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

## ಪರಿವಿಡಿ


| | | ಪುಟ |
|---|---|---|
| 01. ಸಮಿತಿಯ ರಚನೆ | ..... | iii |
| 02. ಮುನ್ನುಡಿ | ..... | v-vi |
| 03. ವರದಿ | ..... | 1–2 |
| 04. ಶಿಫಾರಸ್ಸುಗಳು | ..... | 3–11 |
| 04. ಅನುಬಂಧಗಳು | ..... | 15–67 |

## ಸಮಿತಿಯ ರಚನೆ

## 2025-2026

### ಅಧ್ಯಕ್ಷರು

**ಶ್ರೀ ಪುಟ್ಟಣ್ಣ**

### ಸದಸ್ಯರು

ಶ್ರೀಯುತರುಗಳಾದ:–

| | | |
|---|---|---|
| 01. | ಶಶೀಲ್ ಜಿ. ನಮೋಶಿ | : ವಿಧಾನ ಪರಿಷತ್ತಿನ ಸದಸ್ಯರು |
| 02. | ಎಸ್.ವ್ಹಿ.ಸಂಕನೂರ | : ವಿಧಾನ ಪರಿಷತ್ತಿನ ಸದಸ್ಯರು |
| 03. | ನಿರಾಣಿ ಹಣಮಂತ ರುದ್ರಪ್ಪ | : ವಿಧಾನ ಪರಿಷತ್ತಿನ ಸದಸ್ಯರು |
| 04. | ಎಸ್.ಎಲ್. ಭೋಜೇಗೌಡ | : ವಿಧಾನ ಪರಿಷತ್ತಿನ ಸದಸ್ಯರು |
| 05. | ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) | : ವಿಧಾನ ಪರಿಷತ್ತಿನ ಸದಸ್ಯರು |

### ಕರ್ನಾಟಕ ವಿಧಾನ ಪರಿಷತ್ತಿನ ಅಧಿಕಾರಿಗಳು

ಶ್ರೀಯುತರುಗಳಾದ:

| | | |
|---|---|---|
| 1. | ಜ್ಯೋತಿ | : ಕಾರ್ಯದರ್ಶಿ (ಪ್ರ) |
| 2. | ಬಿ.ಎ. ಬಸವರಾಜು | : ಉಪ ಕಾರ್ಯದರ್ಶಿ |
| 3. | ಕೆ.ಎಸ್.ಚಂದ್ರಶೇಖರ | : ಶಾಖಾಧಿಕಾರಿ |

# ಭಾಗ – 1

## ಮುನ್ನುಡಿ

ದಿನಾಂಕ: 19.03.2025 ರಂದು ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಾದ ಶ್ರೀ ಪುಟ್ಟಣ್ಣ, ಎಸ್.ವ್ಹಿ. ಸಂಕನೂರ, ಎಸ್.ಎಲ್.ಭೋಜೇಗೌಡ, ಶಶೀಲ್ ಜಿ. ನಮೋಶಿ ಹಾಗೂ ಡಾ: ಧನಂಜಯ ಸರ್ಜಿ ಅವರುಗಳು ನಿಯಮ 330ರಡಿಯಲ್ಲಿ ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದಿದ ಶಿಕ್ಷಕರುಗಳು ಹಾಗೂ ಬಡ್ತಿ ಹೊಂದದೆ 10,15,20,25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಬಡ್ತಿ ಸೌಲಭ್ಯಗಳನ್ನು ಪಡೆದಿರುವ ಶಿಕ್ಷಕರುಗಳ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸಲು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ದಿನಾಂಕ: 13.08.2025ರಲ್ಲಿ ನಡವಳಿಯನ್ನು ಮಾನ್ಯ ಸಭಾಪತಿಯವರಿಗೆ ನೀಡಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ರಚಿಸುವಂತೆ ಕೋರಿರುತ್ತಾರೆ. ಅದರಂತೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ) ರೀತ್ಯಾ ಮಾನ್ಯ ಶಾಸಕರಾದ ಶ್ರೀ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ 05 ಜನ ಶಾಸಕರುಗಳನ್ನೊಳಗೊಂಡ ವಿಶೇಷ ಸದನ ಸಮಿತಿಯನ್ನು ರಚಿಸಿ ಮೂರು ತಿಂಗಳೊಳಗೆ ವರದಿಯನ್ನು ಸಲ್ಲಿಸಲು ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಅದರಂತೆ, ದಿನಾಂಕ: 02.08.2025 ರಂದು ವಿಶೇಷ ಸದನ ಸಮಿತಿಯು ರಚನೆಗೊಂಡಿದ್ದು, ದಿನಾಂಕ: 09.09.2026ರಂದು ಪ್ರಾರಂಭಿಕ ಸಭೆಯನ್ನು ನಡೆಸಿ ದಿನಾಂಕ:16.09.2025, 07.01.2026, 14.01.2026, 16.06.2026, 10.08.2026 16.09.2026 ಮತ್ತು 21.09.2026ರಂದು ಸಭೆ ಸೇರಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಆರ್ಥಿಕ ಇಲಾಖೆಯ ಅಧಿಕಾರಿಗಳೊಂದಿಗೆ ಹಾಗೂ ಕರ್ನಾಟಕ ರಾಜ್ಯ ಬಡ್ತಿ ಸರ್ಕಾರಿ ಪ್ರೌಢಶಾಲಾ ಶಿಕ್ಷಕರ

ಸಂಘ(ರಿ) ಬೆಂಗಳೂರು ಇದರ ಅಧ್ಯಕ್ಷರು ಹಾಗೂ ಪದಾಧಿಕಾರಿಗಳೊಂದಿಗೆ ವಿಸ್ತೃತವಾದ ಚರ್ಚೆಯನ್ನು ನಡೆಸಲಾಗಿದೆ.

ಇಲಾಖಾಧಿಕಾರಿಗಳು ವಿಶೇಷ ಸದನ ಸಮಿತಿಯು ಬಯಸಿದ ಮಾಹಿತಿಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಪಡೆಯಬೇಕಾಗಿರುವುದರಿಂದ ಕಾಲಾವಕಾಶಗಳನ್ನು ಕೋರಿದ್ದ ಕಾರಣಗಳಿಂದ, ಸಮಿತಿಗೆ ಕಾಲಾವಕಾಶವನ್ನು ದಿನಾಂಕ:08.12.2025 ರಿಂದ 06 ತಿಂಗಳವರೆಗೆ ಹಾಗೂ ದಿನಾಂಕ: 02.06.2026ರಿಂದ 06 ತಿಂಗಳವರೆಗೆ ವಿಸ್ತರಿಸಲಾಗಿರುತ್ತದೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಲಾದ ಕರಡು ವರದಿಯನ್ನು ದಿನಾಂಕ21.09.2026 ರಂದು ನಡೆದ ಸಮಿತಿ ಸಭೆಯಲ್ಲಿ ಪರಿಶೀಲಿಸಿ, ಅಂಗೀಕರಿಸಿ, ಅನುಮೋದಿಸಲಾಗಿರುತ್ತದೆ.

ಸಮಿತಿಯ ಸಭೆಗಳಿಗೆ ಸಹಕರಿಸಿದ ಈ ವಿಶೇಷ ಸದನ ಸಮಿತಿಯ ಮಾನ್ಯ ಸದಸ್ಯರುಗಳು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಸರ್ಕಾರದ ಕಾರ್ಯದರ್ಶಿ ಆರ್ಥಿಕ ಇಲಾಖೆ, ಸರ್ಕಾರದ ಕಾರ್ಯದರ್ಶಿ ಕಾನೂನು ಇಲಾಖೆ ಹಾಗೂ ಸಿಬ್ಬಂದಿ ವರ್ಗದವರಿಗೆ ಮತ್ತು ಕರ್ನಾಟಕ ವಿಧಾನ ಪರಿಷತ್ತಿನ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪುಟ್ಟಣ್ಣ,
ಅಧ್ಯಕ್ಷರು,
ವಿಶೇಷ ಸದನ ಸಮಿತಿ.

ದಿನಾಂಕ:22.09.2026
ಬೆಂಗಳೂರು

## ವರದಿ

**01.** ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರು ವಿದ್ಯಾರ್ಹತೆ ಹಾಗೂ ಸೇವಾ ಜೇಷ್ಠತೆಯ ಮೇಲೆ ಪ್ರಾಥಮಿಕ ಶಾಲಾ ಮುಖ್ಯೋಪಾದ್ಯಾಯರ ಹುದ್ದೆಗೆ ಹಾಗೂ ಮುಖ್ಯೋಪಾದ್ಯಾಯರ ಹುದ್ದೆಯಿಂದ ಹಿರಿಯ ಮುಖ್ಯ ಗುರುಗಳ ಹುದ್ದೆಗೆ ಪಡೆದಿರುವ ಕಾರಣದಿಂದಾಗಿ ಆರ್ಥಿಕ ಇಲಾಖೆ ಹಾಗೂ ಇನ್ನಿತರ ಇಲಾಖೆಗಳ ಸರ್ಕಾರಿ ಆದೇಶಗಳನ್ವಯ 10,15,20,25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿಗಳು, (10 ವರ್ಷಗಳ ಕಾಲಮಿತಿ, 15 ವರ್ಷಗಳ ಸ್ವಯಂ ಚಾಲಿತ. 20ವರ್ಷಗಳ 1ನೇ ಹೆಚ್ಚುವರಿ, 25 ವರ್ಷಗಳ 2ನೇ ಹೆಚ್ಚುವರಿ, 30 ವರ್ಷಗಳ 3ನೇ ಹೆಚ್ಚವರಿ ವೇತನ ಮುಂಬಡ್ತಿಗಳು) ಸಿಗದ ಕಾರಣ, ಪದೋನ್ನತಿ ಶಿಕ್ಷಕರ ಹಾಗೂ ಪದೋನ್ನತಿ ಪಡೆಯದೆ 10,15,20,25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿಗಳನ್ನು ಪಡೆದಿರುವ ಶಿಕ್ಷಕರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯವನ್ನು ಸರಿಪಡಿಸುವುದು.

**02.** ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಗೆ ಪದೋನ್ನತಿ ಪಡೆದಿರುವ ಕಾರಣದಿಂದ್ಹಾಗಿ ಆರ್ಥಿಕ ಇಲಾಖೆ ಹಾಗೂ ಇನ್ನಿತರ ಇಲಾಖೆಗೆ ಸರ್ಕಾರಿ ಆದೇಶಗಳನ್ವಯ 10,15,20,25 ಮತ್ತು 30 ವರ್ಷಗಳ ಕಾಲಬದ್ದ ವೇತನ ಮುಂಬಡ್ತಿಗಳು, (10 ವರ್ಷಗಳ ಕಾಲಮಿತಿ, 15 ವರ್ಷಗಳ ಸ್ವಯಂ ಚಾಲಿತ, 20 ವರ್ಷಗಳ 1ನೇ ಹೆಚ್ಚುವರಿ, 25 ವರ್ಷಗಳ 2ನೇ ಹೆಚ್ಚುವರಿ, 30 ವರ್ಷಗಳ 3ನೇ ಹೆಚ್ಚುವರಿ ವೇತನ ಮುಂಬಡ್ತಿಗಳು) ಸಿಗದ ಕಾರಣ ಪದೋನ್ನತಿ ಶಿಕ್ಷಕರ ಹಾಗೂ ಪದೋನ್ನತಿ ಪಡೆಯದೆ 10,15,20,25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿಗಳನ್ನು ಪಡೆದಿರುವ ಶಿಕ್ಷಕರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯವನ್ನು ಸರಿಪಡಿಸುವುದು.

**03.** ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರು ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ವಿದ್ಯಾರ್ಹತೆ ಹಾಗೂ ಜೇಷ್ಠತೆಯ ಆಧಾರದ ಮೇಲೆ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗೆ ಹಾಗೂ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರು ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ವಿದ್ಯಾರ್ಹತೆ ಹಾಗೂ ಜೇಷ್ಠತೆಯ ಆಧಾರದ ಮೇಲೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ಪಡೆದಿರುವ ಕಾರಣದಿಂದಾಗಿ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶಗಳನ್ವಯ 10,15,20,25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿಗಳು, (10 ವರ್ಷಗಳ ಕಾಲಮಿತಿ, 15 ವರ್ಷಗಳ ಸ್ವಯಂ ಚಾಲಿತ, 20 ವರ್ಷಗಳ 1ನೇ ಹೆಚ್ಚುವರಿ, 25 ವರ್ಷಗಳ 2ನೇ ಹೆಚ್ಚುವರಿ, 30 ವರ್ಷಗಳ 3ನೇ ಹೆಚ್ಚುವರಿ ವೇತನ ಮುಂಬಡ್ತಿಗಳು) ಸಿಗದ ಕಾರಣ ಪದೋನ್ನತಿ ಉಪನ್ಯಾಸಕರ ಹಾಗೂ ಪದೋನ್ನತಿ ಪಡೆಯದೆ 10,15,20,25 ಮತ್ತು 30 ವರ್ಷಗಳ ಕಾಲಬದ್ಧ ವೇತನ

ಮುಂಬಡ್ತಿಗಳನ್ನು ಪಡೆದಿರುವ ಮುಖ್ಯ ಶಿಕ್ಷಕರುಗಳು ಹಾಗೂ ಉಪನ್ಯಾಸಕರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯವನ್ನು ಸರಿಪಡಿಸುವುದು.

**04.** ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಸೇವಾ ಜೇಷ್ಠತೆಯ ಮೇಲೆ ಪ್ರೌಢ ಶಾಲಾ ಮುಖ್ಯೋಪಾದ್ಯಾಯರ ಹುದ್ದೆಗೆ ಪದೋನ್ನತಿ ಪಡೆದಿರುವ ಕಾರಣದಿಂದಾಗಿ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶಗಳನ್ವಯ 10,15,20,25 ಮತ್ತು 30 ವರ್ಷಗಳ ಕಾಲಬದ್ದ ವೇತನ ಮುಂಬಡ್ತಿಗಳು, (10 ವರ್ಷಗಳ ಕಾಲಮಿತಿ, 15 ವರ್ಷಗಳ ಸ್ವಯಂ ಚಾಲಿತ, 20 ವರ್ಷಗಳ 1ನೇ ಹೆಚ್ಚುವರಿ, 25 ವರ್ಷಗಳ 2ನೇ ಹೆಚ್ಚುವರಿ, 30 ವರ್ಷಗಳ 3ನೇ ಹೆಚ್ಚುವರಿ ವೇತನ ಮುಂಬಡ್ತಿಗಳು) ಸಿಗದ ಕಾರಣ ಪದೋನ್ನತಿ ಉಪನ್ಯಾಸಕರ ಹಾಗೂ ಪದೋನ್ನತಿ ಪಡೆಯದೆ 10,15,20,25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿಗಳನ್ನು ಪಡೆದಿರುವ ಶಿಕ್ಷಕರುಗಳ ನಡುವೆ ಉಂಟಾಗಿರುವ ವೇತನ ತಾರತಮ್ಯವನ್ನು ಸರಿಪಡಿಸುವುದು.

*****

## ವಿಶೇಷ ಸದನ ಸಮಿತಿಯ ಶಿಫಾರಸ್ಸುಗಳು

ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದಿದ ಶಿಕ್ಷಕರುಗಳು ಹಾಗೂ ಬಡ್ತಿ ಹೊಂದದೆ 10,15,20,25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಬಡ್ತಿ ಸೌಲಭ್ಯಗಳನ್ನು ಪಡೆದಿರುವ ಶಿಕ್ಷಕರುಗಳ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸಲು ಪರಿಶೀಲಿಸಲು ರಚಿಸಲಾದ ವಿಶೇಷ ಸದನ ಸಮಿತಿಯ ಶಿಫಾರಸ್ಸುಗಳು. (ಅನುಬಂಧ-A)

ಶಿಕ್ಷಕರು ಒಂದು ವೃಂದದಿಂದ ಮತ್ತೊಂದು ವೃಂದಕ್ಕೆ ಬಡ್ತಿ ಪಡೆಯುವ ಸಂದರ್ಭದಲ್ಲಿ ಅವರ ಸೇವಾವಧಿಯಲ್ಲಿ ಇಂತಹ ಬಡ್ತಿಯು ಮುಖ್ಯವಾಗಿ ವಿದ್ಯಾರ್ಹತೆಯನ್ನು ಆಧರಿಸಿರುತ್ತವೆ ಮತ್ತು ವಿರಳವಾಗಿರುತ್ತವೆ (ಸಾಮಾನ್ಯವಾಗಿ ಒಮ್ಮೆ ಮಾತ್ರ ಸಂಭವಿಸುತ್ತವೆ) ಇದು ವಿದ್ಯಾರ್ಹತೆ ಆಧಾರಿತ ಬಡ್ತಿಯಾಗಿರುವುದರಿಂದ ಇದನ್ನು ಇತರ ಸಾಮಾನ್ಯ ಬಡ್ತಿಗಳಂತೆಯೇ ಪರಿಗಣಿಸಿ ನೇಮಕಾತಿ ಸಮಯದಿಂದ ಸಂಬಂಧಪಟ್ಟ ಸಿಬ್ಬಂದಿಯ ಸೇವಾವಧಿಯನ್ನು ಗಣನೆಗೆ ತೆಗೆದುಕೊಳ್ಳದೇ ಕಾಲಬದ್ಧ ವೇತನ ಹೆಚ್ಚಳವನ್ನು ನಿರಾಕರಿಸುವುದರಿಂದ ಅದೇ ವೃಂದದಲ್ಲಿ ಮುಂದುವರಿದು ತಮ್ಮ ಸಹೋದ್ಯೋಗಿಗಳಿಗೆ ಹೋಲಿಸಿದರೆ ಬಡ್ತಿ ಹೊಂದಿದ ಶಿಕ್ಷಕರು ಕಡಿಮೆ ವೇತನ ಪಡೆಯುತ್ತಿರುವುದಾಗಿ ತಿಳಿದು ಬಂದಿದೆ. ಆದ್ದರಿಂದ ಈ ಬಡ್ತಿಯನ್ನು "ವಿದ್ಯಾರ್ಹತಾ ಆಧಾರಿತ ಬಡ್ತಿ" ಎಂದು ಪರಿಗಣಿಸುವುದು ಸೂಕ್ತವಾಗಿದೆ. ಇಂತಹ ಬಡ್ತಿ ಪಡೆದ ಶಿಕ್ಷಕರಿಗೆ ಕಾಲಬದ್ಧ ವೇತನ ಮುಂಬಡ್ತಿಗಳನ್ನು ನೀಡುವಾಗ ನೇಮಕಾತಿಯ ಸಮಯದಿಂದ ಸೇವಾವಧಿಯನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಮಾಡಿರುವ ಶಿಫಾರಸ್ಸಿನಂತೆ ಕ್ರಮವಹಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

## ಭಾಗ– 1

ಅ) ಶಿಕ್ಷಕರು/ಉಪನ್ಯಾಸಕರು/ನೌಕರನಿಗೆ 10 ಸೇವಾವಧಿಗೆ ನೀಡುವ **'ಕಾಲಬದ್ಧ ವೇತನ ಮುಂಬಡ್ತಿ'** ಕುರಿತು ನಿರ್ದೇಶನ ನೀಡುವ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ/105/ಎಸ್‌ಆರ್‌ಪಿ(ಸಿಎಸ್‌ಸಿ)/82, ಬೆಂಗಳೂರು, ದಿನಾಂಕ:08.06.1993ರ **(ಅನುಬಂಧ–01)** ಆದೇಶದಲ್ಲಿ ಕೇಡರ್‌ನಲ್ಲಿ ಸತತ 10 ವರ್ಷಗಳ ಸೇವೆ ಎಂದು ನಿಯಮವಿದೆ. ಈ ವಿಷಯಕ್ಕೆ ತಿದ್ದುಪಡಿ ತಂದು ನೌಕರನು ಪದೋನ್ನತಿ ಆಗಲಿ ಅಥವಾ ಪದೋನ್ನತಿ ಆಗದೆ ಇರಲಿ ನೌಕರನ ನಿರಂತರ ಸೇವೆಯೆಂದು ಸೇರಿಸಬೇಕು. ಈ ರೀತಿ ತಿದ್ದುಪಡಿ ಮಾಡತಕ್ಕದ್ದು. ಮೇಲಿನ ತಿದ್ದುಪಡಿಯಿಂದ ಪದೋನ್ನತಿ ಪಡೆದ ಶಿಕ್ಷಕರುಗಳಿಗೆ/ ಉಪನ್ಯಾಸಕರುಗಳಿಗೆ ಉಪಯೋಗವಾಗಲಿದೆ.

ಆ) ನೌಕರನ 15 ವರ್ಷಗಳ ಸೇವಾವಧಿಗೆ ನೀಡುವ 'ಸ್ವಯಂಚಾಲಿತ ವೇತನ ಮುಂಬಡ್ತಿ' ಕುರಿತು ನಿರ್ದೇಶನ ನೀಡುವ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ/25/ಎಸ್‌ಆರ್‌ಪಿ/91, ಬೆಂಗಳೂರು, ದಿನಾಂಕ:29.10.1991 ರ **(ಅನುಬಂಧ–02)** ಆದೇಶದಲ್ಲಿ ಒಂದು ಕೇಡರ್‌ನಲ್ಲಿ ಸತತ 15 ವರ್ಷಗಳ ಸೇವೆ ಎಂದು ನಿಯಮವಿದೆ. ಈ ವಿಷಯಕ್ಕೆ ತಿದ್ದುಪಡಿ ತಂದು ನೌಕರನು ಪದೋನ್ನತಿ ಆಗಲಿ ಅಥವಾ ಪದೋನ್ನತಿ ಆಗದೇ ಇರಲಿ ನೌಕರನ ನಿರಂತರ ಸೇವೆಯೆಂದು ಸೇರಿಸಬೇಕು. ಈ ರೀತಿ ತಿದ್ದುಪಡಿ ಮಾಡತಕ್ಕದ್ದು.

ಇ) ನೌಕರನ 20 ಸೇವಾ ವರ್ಷಗಳಿಗೆ ನೀಡುವ **'1ನೇ ಹೆಚ್ಚುವರಿ ವೇತನ ಮುಂಬಡ್ತಿ'** ಕುರಿತು ನಿರ್ದೇಶನ ನೀಡುವ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ/13/ಎಸಾರ್‌ಪಿ/2002, ಬೆಂಗಳೂರು, ದಿನಾಂಕ:09.05.2002ರ **(ಅನುಬಂಧ–03)**.

ಆದೇಶದ ಸಂಕ್ಷಿಪ್ತ ವಿವರ: ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದೇ 20 ವರ್ಷಗಳವರೆಗೆ ಅದೇ ಹುದ್ದೆಯಲ್ಲಿರುವ ಸರ್ಕಾರಿ ನೌಕರರಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಲು ಅವಕಾಶವಿದೆ. ಈ ನಿಯಮದಿಂದ ಪದೋನ್ನತಿ ಪಡೆದ ಶಿಕ್ಷಕರುಗಳಿಗೆ ವೇತನ ತಾರತಮ್ಯ ಆಗುತ್ತಿದೆ.

| **ಆದೇಶದಲ್ಲಿನ ಮಾಹಿತಿ** | **ಮಾಡಬೇಕಾದ ತಿದ್ದುಪಡಿ** |
|---|---|
| ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದೇ 20 ವರ್ಷಗಳ ಅದೇ ಹುದ್ದೆಯಲ್ಲಿರುವ ಸರ್ಕಾರಿ ನೌಕರರಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ವಿಚಾರವಿದೆ. | ಪದೋನ್ನತಿ ವಿಷಯವನ್ನು ತೆಗೆದು ನೌಕರನು ಸೇವೆಗೆ ಸೇರಿದ ದಿನಾಂಕದಿಂದ 20 ವರ್ಷಗಳ ಸೇವೆಯನ್ನು ಪರಿಗಣಿಸುವುದು. |

ಮೇಲಿನ ರೀತಿ ತಿದ್ದುಪಡಿ ಮಾಡಿದರೆ ಪದೋನ್ನತಿ ಹೊಂದಿದ ಶಿಕ್ಷಕರುಗಳಿಗೆ ವೇತನ ತಾರತಮ್ಯ ನಿವಾರಣೆ ಮಾಡಬಹುದು.

ಈ) ಶಿಕ್ಷಕರು/ಉಪನ್ಯಾಸಕರು/ನೌಕರರಿಗೆ 25 ಮತ್ತು 30 ವರ್ಷಗಳ ಸೇವಾವಧಿಗೆ ನೀಡುವ **'2ನೇ ಮತ್ತು 3ನೇ ಹೆಚ್ಚುವರಿ ವೇತನ ಮುಂಬಡ್ತಿ'** ಕುರಿತು ನಿರ್ದೇಶನ ನೀಡುವ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ/12/ಎಸ್‌ಆರ್‌ಪಿ/2012, (8) ಬೆಂಗಳೂರು, ದಿನಾಂಕ:14.06.2012ರ **(ಅನುಬಂಧ–04)** ಆದೇಶ ಸಂಕ್ಷಿಪ್ತ ವಿವರ: ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದೆ 25 ಮತ್ತು 30 ವರ್ಷಗಳು ಅದೇ ಹುದ್ದೆಯಲ್ಲಿ ಮುಂದುವರಿದಿರುವ ಸರ್ಕಾರಿ ನೌಕರರಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ವಿಷಯವಿದೆ.

ಈ ನಿಯಮದಿಂದ ಪದೋನ್ನತಿ ಪಡೆದ ಶಿಕ್ಷಕರು/ಉಪನ್ಯಾಸಕರುಗಳಿಗೆ (ಪದೋನ್ನತಿಯ ಅವಕಾಶಗಳು ವಿರಳ/ಕಡಿಮೆ ಇರುವ ನೌಕರರಿಗೆ) ವೇತನ ತಾರತಮ್ಯ ಆಗುತ್ತಿದೆ. ಈ ಹಿನ್ನಲೆಯಲ್ಲಿ ಮೇಲಿನ ಆದೇಶದಲ್ಲಿ ತಿದ್ದುಪಡಿ ಕೆಳಗಿನಂತೆ ಮಾಡಬೇಕಾಗಿರುತ್ತದೆ.

| ಆದೇಶದಲ್ಲಿನ ಮಾಹಿತಿ | ಮಾಡಬೇಕಾದ ತಿದ್ದುಪಡಿ |
|---|---|
| ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದೇ 25 ಮತ್ತು 30 ವರ್ಷಗಳು ಅದೇ ಹುದ್ದೆಯಲ್ಲಿರುವ ಸರ್ಕಾರಿ ನೌಕರರಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ವಿಚಾರವಿದೆ. | ಪದೋನ್ನತಿ ವಿಷಯವನ್ನು ತೆಗೆದು ನೌಕರನು ಸೇವೆಗೆ ಸೇರಿದ ದಿನಾಂಕದಿಂದ 25 ಮತ್ತು 30 ವರ್ಷಗಳ ಸೇವೆಯನ್ನು ಪರಿಗಣಿಸುವುದು. |

## ಭಾಗ– 2

ದಿನಾಂಕ:11.07.2025ರಂದು ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯದ ಪತ್ರದ (ಅನುಬಂಧ–05) ಮಾಹಿತಿಯ ಆಧಾರದ ಮೇಲೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನೀಡಿರುವ ಅಭಿಪ್ರಾಯವನ್ನು ಪರಿಗಣಿಸಲು ಬರುವುದಿಲ್ಲ.

ಅ) ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪದೋನ್ನತಿ ಬದಲಿಗೆ **ಆಯ್ಕೆ ಮೂಲಕ ಪದೋನ್ನತಿ** ಎಂದು ಸೇರಿಸಬೇಕು ಎಂಬ ಅಭಿಪ್ರಾಯವನ್ನು ಆರ್ಥಿಕ ಇಲಾಖೆ ದಿನಾಂಕ:11.07.2025ರಂದು ಇಪಿ/55/ಎಸ್‌ಹೆಚ್/2022ರ ಕಡತದಲ್ಲಿ ನೀಡಿದೆ.

**ಮೇಲಿನಂತೆ ಆಯ್ಕೆ ಮೂಲಕ ಪದೋನ್ನತಿ** ಎಂದು ಸೇರಿಸಿದರೆ 20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿಗಳು ಸರಾಗವಾಗಿ ಸಿಗುತ್ತವೆ ಎಂಬ ಅಭಿಪ್ರಾಯವನ್ನು ಹೇಳಿದಂತಿರುವುದು.

ಮೇಲಿನಂತೆ ತಿದ್ದುಪಡಿ ಮಾಡಿದರೂ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶದ ಸಂಖ್ಯೆ:ಎಫ್‌ಡಿ/13/ಎಸ್‌ಆರ್‌ಪಿ/2002, ಬೆಂಗಳೂರು, ದಿನಾಂಕ:09.05.2002ರ, ಈ ಆದೇಶದಲ್ಲಿನ ನಿಯಮ 3, ನಿಯಮದ ವಿವರ: **ಒಬ್ಬ ಸರ್ಕಾರಿ ನೌಕರನು ತಾನು ಹೊಂದಿರುವ ಹುದ್ದೆಯಲ್ಲಿ 20 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸತತ ಸೇವೆ ಸಲ್ಲಿಸಿರಬೇಕು** ಎಂಬ ಮೇಲಿನ ನಿಯಮ ಪದೋನ್ನತಿ ಪಡೆದ ಶಿಕ್ಷಕರು / ಉಪನ್ಯಾಸಕರಿಗೆ ಒಂದನೇ ಹೆಚ್ಚುವರಿ ವೇತನ ಬಡ್ತಿ ನೀಡಲು ಅಡ್ಡಿಯಾಗಲಿದೆ. ಉದ್ದೇಶಿತ 'ಸಿ' ಅಂಡ್ 'ಆರ್' ನಿಯಮಗಳಲ್ಲಿ ಪದೋನ್ನತಿಯ ಬದಲಿಗೆ ಆಯ್ಕೆಯ ಮೂಲಕ ಪದೋನ್ನತಿ ಎಂದು ಸೇರ್ಪಡೆ ಮಾಡಿದರೂ 20 ವರ್ಷಗಳ 1ನೇ ಹೆಚ್ಚುವರಿ ವೇತನ ಮುಂಬಡ್ತಿಯನ್ನು ಪದೋನ್ನತಿ ಪಡೆದ ಶಿಕ್ಷಕರು ಪಡೆಯಲು ಅವಕಾಶವಿರುವುದಿಲ್ಲ.

ಮುಂದುವರಿದು ...

ಆ) 25 ಮತ್ತು 30 ವರ್ಷಗಳ 2ನೇ ಮತ್ತು 3ನೇ ಹೆಚ್ಚುವರಿ ವೇತನ ಮುಂಬಡ್ತಿಗಳ ವಿಚಾರದಲ್ಲಿ 'ಸಿ' ಅಂಡ್ 'ಆರ್' ನಿಯಮದಲ್ಲಿ ಪದೋನ್ನತಿಯ ಬದಲಿಗೆ ಆಯ್ಕೆಯ ಮೂಲಕ ಪದೋನ್ನತಿ ಎಂದು ಸೇರಿಸಿ ತಿದ್ದುಪಡಿ ಮಾಡಿದರೂ 2ನೇ ಮತ್ತು 3ನೇ ಹೆಚ್ಚುವರಿ ವೇತನ ಮುಂಬಡ್ತಿಗಳನ್ನು ಪದೋನ್ನತಿ ಪಡೆದ ಶಿಕ್ಷಕರು ಪಡೆಯಲು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ/12/ಎಸ್‌ಆರ್‌ಪಿ/2012, (8) ಬೆಂಗಳೂರು, ದಿನಾಂಕ:14.06.2012 ಈ ಆದೇಶದ ನಿಯಮ 4, ವಿವರ: **ಒಬ್ಬ ಸರ್ಕಾರಿ ನೌಕರನು ತಾನು ಹೊಂದಿರುವ ಹುದ್ದೆಯಲ್ಲಿ 25 ಅಥವಾ 30 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸತತ ಸೇವೆ ಸಲ್ಲಿಸಿರಬೇಕು** ಎಂಬ ನಿಯಮ ಅಡ್ಡಿಯಾಗಲಿದೆ. ಈ ಕಾರಣದಿಂದಾಗಿ 'ಸಿ' ಅಂಡ್ 'ಆರ್' ನಿಯಮಗಳಲ್ಲಿ ಪದೋನ್ನತಿಯ ಬದಲಿಗೆ **ಆಯ್ಕೆಯ ಮೂಲಕ ಪದೋನ್ನತಿ** ಎಂದು

ಸೇರ್ಪಡೆ ಮಾಡಿದರೂ 25 ವರ್ಷಗಳ 2ನೇ ಹೆಚ್ಚುವರಿ ವೇತನ ಮುಂಬಡ್ತಿ ಹಾಗೂ 30 ವರ್ಷಗಳ 3ನೇ ಹೆಚ್ಚುವರಿ ವೇತನ ಮುಂಬಡ್ತಿ ಈ ಎರಡು ಹೆಚ್ಚುವರಿ ವೇತನ ಮುಂಬಡ್ತಿಗಳನ್ನು ಪದೋನ್ನತಿ ಪಡೆದ ಶಿಕ್ಷಕರು/ ಉಪನ್ಯಾಸಕರು ಪಡೆಯಲು ಅವಕಾಶವಿರುವುದಿಲ್ಲ.

ಒಟ್ಟಾರೆ ಹೇಳುವುದಾದರೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪದೋನ್ನತಿಯ ಬದಲಿಗೆ ಆಯ್ಕೆಯ ಮೂಲಕ ಪದೋನ್ನತಿ ಎಂದು ಸೇರಿಸಿ ತಿದ್ದುಪಡಿ ಮಾಡಿದರೂ ಆರ್ಥಿಕ ಇಲಾಖೆಯ ಆದೇಶಗಳಾದ –

1) ಆದೇಶಸಂಖ್ಯೆ:ಎಫ್‌ಡಿ/13/ಎಸ್‌ಆರ್‌ಪಿ/2002, ಬೆಂಗಳೂರು, ದಿನಾಂಕ: 09.05.2002.

2) ಆದೇಶ ಸಂಖ್ಯೆ:ಎಫ್‌ಡಿ/12/ಎಸ್‌ಆರ್‌ಪಿ/2012, (8) ಬೆಂಗಳೂರು, ದಿನಾಂಕ:14.06.2012.

ಮೇಲಿನ ಆದೇಶಗಳ ನಿಯಮಗಳಲ್ಲಿ ತಿದ್ದುಪಡಿ ಮಾಡಬೇಕು. ಆಗ ಮಾತ್ರ ಪದೋನ್ನತಿ ಮೂಲಕ ಅಥವಾ ಆಯ್ಕೆಯ ಮೂಲಕ ಪದೋನ್ನತಿ ಆದ ಶಿಕ್ಷಕರು/ಉಪನ್ಯಾಸಕರಿಗೆ 20 ವರ್ಷಗಳ 1ನೇ ಹೆಚ್ಚುವರಿ ವೇತನ ಮುಂಬಡ್ತಿ ಹಾಗ್ಲೂ 25 ವರ್ಷಗಳ 2ನೇ ಹೆಚ್ಚುವರಿ ವೇತನ ಮುಂಬಡ್ತಿ ಮತ್ತು 30 ವರ್ಷಗಳ 3ನೇ ಹೆಚ್ಚುವರಿ ವೇತನ ಮುಂಬಡ್ತಿ, ಈ ವೇತನ ಮುಂಬಡ್ತಿಗಳನ್ನು ಪಡೆಯಲು ಅನುಕೂಲ ಆಗಿ ವೇತನ ತಾರತಮ್ಯವನ್ನು ಸರಿಪಡಿಸಲು ಸಾಧ್ಯವಾಗಲಿದೆ.

## ಭಾಗ – 3

ಕೇವಲ ಸೇವಾ ಜೇಷ್ಠತೆಯ ಮೇಲೆ ಪದೋನ್ನತಿ ಹೊಂದಿದ ನೌಕರರಿಗೂ ಹಾಗೆಯೇ ಸೇವಾ ಜೇಷ್ಠತೆಯ ಮತ್ತು ವಿದ್ಯಾರ್ಹತೆ ಮೇಲೆ ಪದೋನ್ನತಿ ಪಡೆದ ಶಿಕ್ಷಕರು/ಉಪನ್ಯಾಸಕರಿಗೂ, ಈ ಇಬ್ಬರಿಗೂ ಅನ್ವಯವಾಗುವ ಆರ್ಥಿಕ ಇಲಾಖೆಯ ಆದೇಶ ಒಂದೇ ಆಗಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.

ಒಂದು ವಿಧದ ಕಷ್ಟಪಟ್ಟಿರುವವರೂ ಒಂದೇ, ಎರಡು ವಿಧದ ಕಷ್ಟಪಟ್ಟಿರುವವರೂ ಒಂದೇ ರೀತಿಯಲ್ಲಿ ಆರ್ಥಿಕ ಇಲಾಖೆಯ ಆದೇಶಗಳು ಕಾಲಬದ್ಧ ವೇತನ ಮುಂಬಡ್ತಿಗಳನ್ನು ಪಡೆಯುವುದರ ಸಂಬಂಧದಲ್ಲಿ ತಾರತಮ್ಯ ಮಾಡುತ್ತಿರುವುದು ಕಂಡು ಬರುತ್ತದೆ.

ಈ ಹಿನ್ನಲೆಯಲ್ಲಿ ಸೇವಾ ಜೇಷ್ಠತೆಯ ಜೊತೆಗೆ ಹೆಚ್ಚುವರಿ ವಿದ್ಯಾರ್ಹತೆಯ ಮೇಲೆ ಪದೋನ್ನತಿ ಹೊಂದಿರುವ ಶಿಕ್ಷಕರಿಗೆ ಮತ್ತು ಉಪನ್ಯಾಸಕರುಗಳಿಗೆ ಪ್ರಸ್ತುತ ಇರುವ ಆರ್ಥಿಕ ಇಲಾಖೆ ಆದೇಶಗಳಿಂದ ಹೊರಗಿಟ್ಟು ಕಾಲಬದ್ಧ ವೇತನ ಮುಂಬಡ್ತಿಗಳನ್ನು ಸರಾಗವಾಗಿ ಪಡೆಯಲು ಪ್ರತ್ಯೇಕ ನಿಯಮಗಳನ್ನು ರೂಪಿಸಿ ಶಿಕ್ಷಕರು ಹಾಗೂ ಉಪನ್ಯಾಸಕರುಗಳಿಗೆ ವೇತನ ತಾರತಮ್ಯ ಆಗದ ರೀತಿಯಲ್ಲಿ ಕಾಪಾಡಬೇಕು ಆ ಮೂಲಕ ರಾಜ್ಯದ ಶಿಕ್ಷಕ ವರ್ಗವನ್ನು ವಿಶಿಷ್ಟ ರೀತಿಯಲ್ಲಿ ಕಾಣಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

## ಭಾಗ – 4

ಪದೋನ್ನತಿ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಆಗುತ್ತಿರುವ ವೇತನ ತಾರತಮ್ಯವನ್ನು ಸರಿಪಡಿಸಲು ರಾಜ್ಯ 6ನೇ ವೇತನ ಆಯೋಗವು ತನ್ನ ವರದಿ ಸಂಪುಟ ಎರಡರ ಅಧ್ಯಾಯ–02ರಲ್ಲಿ ವೇತನ ಮತ್ತು ಭತ್ಯೆಗಳ ಹೊಂದಾಣಿಕೆ, ಬಡ್ತಿ ನೌಕರರು ಪಡೆಯುವ ಕಡಿಮೆ ವೇತನ ಪಡೆಯುತ್ತಿದ್ದು ಇದನ್ನು ಸರಿಪಡಿಸಲು ಕಂಡಿಕೆ–7, 8, 9, 10, 11, 12 ಮತ್ತು 13 ರಲ್ಲಿ ಶಿಫಾರಸ್ಸು ಮಾಡಿದೆ. ಹಾಗೆಯೇ ಅಧ್ಯಾಯ–8ರ ಶಿಫಾರಸ್ಸುಗಳ ಸಾರಾಂಶದ ಅಡಿಯಲ್ಲಿ ಕಂಡಿಕೆ–2ರಲ್ಲಿ ಸ್ಪಷ್ಟವಾಗಿ ಪದೋನ್ನತಿ ಹೊಂದಿದ ಶಿಕ್ಷಕರು/ಉಪನ್ಯಾಸಕರ ವೇತನವು ಪದೋನ್ನತಿ ಹೊಂದದ ಶಿಕ್ಷಕರು/ಉಪನ್ಯಾಸಕರ ವೇತನಕ್ಕಿಂತ ಕಡಿಮೆ ಇರುವುದನ್ನು ಅವಲೋಕಿಸಿ ಅದನ್ನು ಸರಿಪಡಿಸಲು ಮೇಲಿನ ಕಂಡಿಕೆಗಳಲ್ಲಿ ಶಿಫಾರಸ್ಸು ಮಾಡಿದೆ. **(ಅನುಬಂಧ–06)**

ರಾಜ್ಯ 6ನೇ ವೇತನ ಆಯೋಗವು ಶಿಫಾರಸ್ಸು ಮಾಡಿದ್ದರೂ ಆರ್ಥಿಕ ಇಲಾಖೆಯು 4 ಕಾರಣಗಳನ್ನು ಕೊಟ್ಟು ಆದೇಶವನ್ನು ಸಂಖ್ಯೆ: ಎಫ್‌ಡಿ/24/ಎಸ್‌ಆರ್‌ಪಿ/2018 (8) ಬೆಂಗಳೂರು, ದಿನಾಂಕ:28.05.2019 (ಅನುಬಂಧ–07) ಈ ಆದೇಶದ ಮೂಲಕ ತಿರಸ್ಕರಿಸಿರುವುದು ವಿಷಾದನೀಯ ಸಂಗತಿಯಾಗಿದೆ. ಸದನ ಸಮಿತಿಯು ಈ ವಿಚಾರವನ್ನು ಗಮನಿಸಿ ಆರ್ಥಿಕ ಇಲಾಖೆಯ ಆದೇಶವಾದ ಸಂಖ್ಯೆ:ಎಫ್‌ಡಿ/24/ಎಸ್‌ಆರ್‌ಪಿ/2018(8) ಬೆಂಗಳೂರು, ದಿನಾಂಕ:28.05.2019 ಇದನ್ನು ಹಿಂಪಡೆದು ಆಯೋಗದ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವುದು.

## ಭಾಗ –5

ತೆಲಂಗಾಣ ರಾಜ್ಯದ ಆರ್ಥಿಕ ಇಲಾಖೆಯ (ಹೆಚ್‌ಆರ್ ಎಂ.4) ಜಿ.ಓ.ಎಂ.ಎಸ್. ನಂ38, ದಿನಾಂಕ:15.04.2015ರ (**ಅನುಬಂಧ–08** ರಂತೆ) ನಿರಂತರ ಸೇವೆಯನ್ನು ಪರಿಗಣಿಸಿ, ಕಾಲಬದ್ಧ ವೇತನ ಮುಂಬಡ್ತಿಗಳನ್ನು ಕೊಡಲು ಕ್ರಮವಹಿಸಿರುತ್ತದೆ. ಅದರಂತೆ, ನಮ್ಮ ರಾಜ್ಯದ ಆರ್ಥಿಕ ಇಲಾಖೆಯು ಪ್ರಸ್ತುತ ಇರುವ ಆದೇಶಗಳನ್ನು ಮಾರ್ಪಾಡು ಮಾಡಲು ಕ್ರಮವಹಿಸಬೇಕೆಂದು ವಿಶೇಷ ಸದನ ಸಮಿತಿಯು ಶಿಫಾರಸ್ಸು ಮಾಡುತ್ತದೆ.

ವಿಶೇಷ ಸದನ ಸಮಿತಿಯ ಈ ಮಧ್ಯಂತರ ವರದಿಯಲ್ಲಿನ ಶಿಫಾರಸ್ಸುಗಳನ್ನು 45 ದಿನಗಳೊಳಗಾಗಿ ಜಾರಿಗೊಳಿಸಿ ಅನುಪಾಲನಾ ವರದಿಯನ್ನು ಸಲ್ಲಿಸಬೇಕೆಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಶಿಫಾರಸ್ಸು ಮಾಡುತ್ತದೆ.

## ಭಾಗ –6

ಒಟ್ಟಾರೆ ಈ ಎಲ್ಲಾ ಶಿಫಾರಸ್ಸುಗಳು ಮತ್ತು ಅಂಶಗಳನ್ನು ಪರಿಗಣಿಸಿ, ಶಿಕ್ಷಕರು/ಉಪನ್ಯಾಸಕರ ಪ್ರಾರಂಭಿಕ ನೇಮಕಾತಿಯನ್ನು ನಿರಂತರವಾಗಿ ಪರಿಗಣಿಸಿ, ಅವರು ಯಾವಾಗ ನೇಮಕಾತಿ ಹೊಂದಿದ್ದರೋ, ಆವತ್ತಿನಿಂದ ನಿರಂತರವಾದ ಸೇವೆಯನ್ನು ಪರಿಗಣನೆಗೆ ತೆಗೆದುಕೊಂಡು ವೇತನ ಬಡ್ತಿ ಸೌಲಭ್ಯಗಳನ್ನು ಕೊಡತಕ್ಕದ್ದು. ಪ್ರಮೋಷನ್ ಬೈ ಸೆಲೆಕ್ಷನ್ ಎಂದು ನೇಮಕಾತಿ ನಿಯಮಾವಳಿಗೆ (C&R) ತಿದ್ದುಪಡಿ ತಂದು ಅನುಷ್ಠಾನಗೊಳಿಸತಕ್ಕದ್ದು. ಈಗಾಗಲೇ 6ನೇ ವೇತನ ಆಯೋಗದಲ್ಲಿ ಶಿಫಾರಸ್ಸು ಮಾಡಿರುವುದರಿಂದ, ಯಾವುದೇ ಕಾರಣಕ್ಕೂ ಪುನಃ ಮುಂದಿನ ವೇತನ ಆಯೋಗದ ಕಾರ್ಯವ್ಯಾಪ್ತಿಗೆ ಒಳಪಡಿಸುವುದಾಗಲಿ, ಪತ್ರ ಬರೆಯುವುದಾಗಲಿ ಮಾಡತಕ್ಕದ್ದಲ್ಲವೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

**ದಿನಾಂಕ: 22.09.2026**

**ಬೆಂಗಳೂರು.**

**ಪುಟ್ಟಣ್ಣ**
**ಅಧ್ಯಕ್ಷರು,**
**ವಿಶೇಷ ಸದನ ಸಮಿತಿ.**

**ಜ್ಯೋತಿ**
**ಕಾರ್ಯದರ್ಶಿ(ಪ್ರ)**
**ಕರ್ನಾಟಕ ವಿಧಾನ ಪರಿಷತ್ತು.**

# ಅನುಬಂಧಗಳು

# ಉಪನಿರ್ದೇಶಕರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ದಿ 19-08-92 ರಲ್ಲಿ ಪ್ರಾಥಮಿಕ ಶಿಕ್ಷಕರಾಗಿ ನೇಮಕಾತಿ ಹೊಂದಿದ್ದ ಶ್ರೀ ದ. ಂದ್ರಪ್ಪ ಎಂ ಎಸ್ ಇವರ ವೇತನ ನಿಗದಿ

| ಹಾಲಿ ವಾರ್ಷಿಕ ಬಡ್ತಿ ದಿನಾಂಕ | ಹಾಲಿ ಪಡೆಯುತ್ತಿದ್ದ ವೇತನ | ಬಡ್ತಿ ದರ | ಹಾಲಿ ಪಡೆಯುತ್ತಿದ್ದ ವೇತನ |
|---|---|---|---|
| 19-08-1992 | 1040 | 20 | 1040-1900 |
| 01-08-1993 | 1060 | 20 | ವಾರ್ಷಿಕ ಬಡ್ತಿ |
| 01-08-1994 | 1160 | 130 | 1994ರ ಪರಿಷ್ಕೃತ ವೇತನ ಶ್ರೇಣಿ |
| 01-08-1994 | 1190 | 30 | ವಾರ್ಷಿಕ ಬಡ್ತಿ |
| 01-08-1995 | 1220 | 30 | ವಾರ್ಷಿಕ ಬಡ್ತಿ |
| 01-08-1996 | 1250 | 30 | ವಾರ್ಷಿಕ ಬಡ್ತಿ |
| 01-08-1997 | 1280 | 30 | ವಾರ್ಷಿಕ ಬಡ್ತಿ |
| 01-08-1998 | 1310 | 30 | ವಾರ್ಷಿಕ ಬಡ್ತಿ |
| 01-08-1998 | 3650 | 2340 | 1998ರ ಪರಿಷ್ಕೃತ ವೇತನ ಶ್ರೇಣಿ 3300-6300 |
| 01-08-1999 | 3750 | 100 | ವಾರ್ಷಿಕ ಬಡ್ತಿ |
| 01-08-2000 | 3850 | 100 | ವಾರ್ಷಿಕ ಬಡ್ತಿ |
| 01-08-2001 | 3950 | 100 | ವಾರ್ಷಿಕ ಬಡ್ತಿ |
| 01-08-2002 | 4050 | 100 | ವಾರ್ಷಿಕ ಬಡ್ತಿ |
| 19-08-2002 | 4150 | 100 | 3850-7050 ಕಾಲಮಿತಿ ಬಡ್ತಿ ನಿಗದಿ |
| 01-08-2003 | 4250 | 100 | ವಾರ್ಷಿಕ ಬಡ್ತಿ |
| 01-08-2004 | 4350 | 100 | ವಾರ್ಷಿಕ ಬಡ್ತಿ |
| 01-08-2005 | 4450 | 100 | ವಾರ್ಷಿಕ ಬಡ್ತಿ |
| 01-08-2006 | 4575 | 125 | ವಾರ್ಷಿಕ ಬಡ್ತಿ |
| 01-08-2006 | 8825 | 4300 | 2006ರ ಪರಿಷ್ಕೃತ ವೇತನ ಶ್ರೇಣಿ 7275-13350 |
| 01-08-2007 | 9050 | 225 | ವಾರ್ಷಿಕ ಬಡ್ತಿ |
| 19-08-2007 | 9275 | 225 | ಸ್ವ.ಪಾ.ಬ. 8000-14800 |

ದಿ 19-08-92 ರಲ್ಲಿ ಪ್ರಾಥಮಿಕ ಶಿಕ್ಷಕರಾಗಿ ನೇಮಕ ಹೊಂದಿದ್ದ ಪ್ರೌಢ ಶಾಲೆಗೆ 12-10-2007 ಬಡ್ತಿ ಹೊಂದಿದ ಶ್ರೀ ಶಿವಾನಂದಪ್ಪ ಕಾಂಬಳಿ ಇವರ ವೇತನ ನಿಗದಿ

| ಹಾಲಿ ವಾರ್ಷಿಕ ಬಡ್ತಿ ದಿನಾಂಕ | ಹಾಲಿ ಪಡೆಯುತ್ತಿದ್ದ ವೇತನ | ಬಡ್ತಿ ದರ | ಹಾಲಿ ಪಡೆಯುತ್ತಿದ್ದ ವೇತನ |
|---|---|---|---|
| 19-08-1992 | 1040 | 20 | 1040-1900 |
| 01-08-1993 | 1160 | 20 | ವಾರ್ಷಿಕ ಬಡ್ತಿ |
| 01-08-1994 | 1160 | 130 | 1994ರ ಪರಿಷ್ಕೃತ ವೇತನ ಶ್ರೇಣಿ |
| 01-08-1994 | 1190 | 30 | ವಾರ್ಷಿಕ ಬಡ್ತಿ |
| 01-08-1995 | 1120 | 30 | ವಾರ್ಷಿಕ ಬಡ್ತಿ |
| 01-08-1996 | 1250 | 30 | ವಾರ್ಷಿಕ ಬಡ್ತಿ |
| 01-08-1997 | 1280 | 30 | ವಾರ್ಷಿಕ ಬಡ್ತಿ |
| 01-08-1998 | 1310 | 30 | ವಾರ್ಷಿಕ ಬಡ್ತಿ |
| 01-08-1998 | 3650 | 2340 | 1998ರ ಪರಿಷ್ಕೃತ ವೇತನ ಶ್ರೇಣಿ 3300-6300 |
| 01-08-1999 | 3750 | 100 | ವಾರ್ಷಿಕ ಬಡ್ತಿ |
| 01-08-2000 | 3850 | 100 | ವಾರ್ಷಿಕ ಬಡ್ತಿ |
| 01-08-2001 | 3950 | 100 | ವಾರ್ಷಿಕ ಬಡ್ತಿ |
| 01-08-2002 | 4050 | 100 | ವಾರ್ಷಿಕ ಬಡ್ತಿ |
| 19-08-2002 | 4150 | 100 | 3850-7050 ಕಾಲಮಿತಿ ಬಡ್ತಿ ನಿಗದಿ |
| 01-08-2003 | 4250 | 100 | ವಾರ್ಷಿಕ ಬಡ್ತಿ |
| 01-08-2004 | 4350 | 100 | ವಾರ್ಷಿಕ ಬಡ್ತಿ |
| 01-08-2005 | 4450 | 100 | ವಾರ್ಷಿಕ ಬಡ್ತಿ |
| 01-08-2006 | 4575 | 125 | ವಾರ್ಷಿಕ ಬಡ್ತಿ |
| 01-08-2006 | 8825 | 4300 | 2006ರ ಪರಿಷ್ಕೃತ ವೇತನ ಶ್ರೇಣಿ 7275-13350 |
| 01-08-2007 | 9050 | 225 | ವಾರ್ಷಿಕ ಬಡ್ತಿ |
| 19-08-2007 | 9275 | 225 | ಸ್ವ.ಪಾ.ಬ. 8000-14800 |

21 32 64

| ಹಾಲಿ ... ಬಡ್ತಿ ದಿನಾಂಕ | ಹಾಲಿ ಪಡೆಯುತ್ತಿದ್ದ ವೇತನ | ಬಡ್ತಿ ದರ | ಹಾಲಿ ಪಡೆಯುತ್ತಿದ್ದ ವೇತನ |
|---|---|---|---|
| | | | |
| 01-08-2008 | 9500 | 225 | ವಾರ್ಷಿಕ ಬಡ್ತಿ |
| 01-08-2009 | 9750 | 250 | ವಾರ್ಷಿಕ ಬಡ್ತಿ |
| 01-08-2010 | 10000 | 250 | ವಾರ್ಷಿಕ ಬಡ್ತಿ |
| 01-08-2011 | 10250 | 250 | ವಾರ್ಷಿಕ ಬಡ್ತಿ |
| 01-04-2012 | 20500 | 10250 | 2012ರ ಪರಿಷ್ಕೃತ ವೇತನ ಶ್ರೇಣಿ 16000-29600 |
| 01-08-2012 | 21000 | 500 | ವಾರ್ಷಿಕ ಬಡ್ತಿ |
| 19-08-2012 | 21600 | 600 | 20.ವ.ಹೆ.ವೇ.ಬ 16000-29600 |
| 01-08-2013 | 22200 | 600 | ವಾರ್ಷಿಕ ಬಡ್ತಿ |
| 01-08-2014 | 22800 | 600 | ವಾರ್ಷಿಕ ಬಡ್ತಿ |
| 01-08-2015 | 23400 | 600 | ವಾರ್ಷಿಕ ಬಡ್ತಿ |
| 01-08-2016 | 24000 | 600 | ವಾರ್ಷಿಕ ಬಡ್ತಿ |
| | | | |
| 01-08-2017 | 24600 | 600 | ವಾರ್ಷಿಕ ಬಡ್ತಿ |
| 19-08-2017 | 25300 | 700 | 25.ವ.ಹೆ.ವೇ.ಬ 16000-29600 |
| 01-08-2017 | 46400 | 21800 | 2018ರ ಪರಿಷ್ಕೃತ ವೇತನ ಶ್ರೇಣಿ 30350-58250 |
| 01-08-2018 | 47650 | 1250 | ವಾರ್ಷಿಕ ಬಡ್ತಿ |
| 01-07-2019 | 48900 | 1250 | ವಾರ್ಷಿಕ ಬಡ್ತಿ |
| 01-07-2020 | 50150 | 1250 | ವಾರ್ಷಿಕ ಬಡ್ತಿ |
| 08-06-2020 | 51400 | 1250 | ಸ್ವಾ.ಚಾ.ಮು.ಶಿ ವೇತನ ಬಡ್ತಿ ನಿಗದಿ 30350-58250 |
| 01-07-2021 | 52650 | 1250 | |

| ಹಾಲಿ ವಾರ್ಷಿಕ ಬಡ್ತಿ ದಿನಾಂಕ | ಹಾಲಿ ಪಡೆಯುತ್ತಿದ್ದ ವೇತನ | ಬಡ್ತಿ ದರ | ಹಾಲಿ ಪಡೆಯುತ್ತಿದ್ದ ವೇತನ |
|---|---|---|---|
| 11-10-2007 | 9500 | 225 | 8825-16000 ಪ್ರೌಢ ಶಾಲಾ ಸಹ ಶಿಕ್ಷಕರಾಗಿ ಬಡ್ತಿ |
| 01-08-2008 | 9750 | 225 | ವಾರ್ಷಿಕ ಬಡ್ತಿ |
| 01-08-2009 | 10000 | 250 | ವಾರ್ಷಿಕ ಬಡ್ತಿ |
| 01-08-2010 | 10250 | 250 | ವಾರ್ಷಿಕ ಬಡ್ತಿ |
| 01-08-2011 | 10500 | 250 | ವಾರ್ಷಿಕ ಬಡ್ತಿ |
| 01-04-2012 | 21000 | 10500 | 2012ರ ಪರಿಷ್ಕೃತ ವೇತನ ಶ್ರೇಣಿ 16000-29600 |
| 01-08-2012 | 21600 | 600 | ವಾರ್ಷಿಕ ಬಡ್ತಿ |
| | | | |
| 01-08-2013 | 22200 | 600 | ವಾರ್ಷಿಕ ಬಡ್ತಿ |
| 01-08-2014 | 22800 | 600 | ವಾರ್ಷಿಕ ಬಡ್ತಿ |
| 01-08-2015 | 23400 | 600 | ವಾರ್ಷಿಕ ಬಡ್ತಿ |
| 01-08-2016 | 24000 | 600 | ವಾರ್ಷಿಕ ಬಡ್ತಿ |
| 01-06-2016 | 24000+600 | | ಹೆಚ್ಚುವರಿ ವಿಶೇಷ ವೇತನ ಬಡ್ತಿ |
| 01-08-2017 | 24600+600 | 600 | ವಾರ್ಷಿಕ ಬಡ್ತಿ |
| | | | |
| 01-08-2017 | 46400 | 21800 | 2018ರ ಪರಿಷ್ಕೃತ ವೇತನ ಶ್ರೇಣಿ 33450-62600 |
| 01-08-2018 | 47650 | 1250 | ವಾರ್ಷಿಕ ಬಡ್ತಿ |
| 01-07-2019 | 48900 | 1250 | ವಾರ್ಷಿಕ ಬಡ್ತಿ |
| 01-07-2020 | 50150 | 1250 | ವಾರ್ಷಿಕ ಬಡ್ತಿ |
| | | | |
| 01-07-2021 | 51400 | 1250 | ವಾರ್ಷಿಕ ಬಡ್ತಿ |

52150
51400
1250
16

16/4/21

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ

ಅನುಬಂಧ-01



## Finance Secretariat

Notification No. FD 105 SRP (CSC) 82 Bangalore,
dated 8th June 1983.

In exercise of the powers conferred by proviso to article 309 of the Constitution of India and in supersession of Government Order Nos. FD 82 SRP 79 dated 22nd January 1980, FD 39 SRP 80 dated 11th December 1980 and FD 88 SRP (CSC) 81 dated 27th March 1982, the Governor of Karnataka, hereby makes the following rules, namely :-

**1. Tittle, commencement and application** :-(1) These rules may be called the Karnataka Civil Services (Time bound Advancement) Rules, 1983.

(2) They shall come into force on the date of their publication in the official Gazette.

(3) They shall apply to all Government servants governed by the Karnataka Civil Services Rules except :-

(a) persons whose appointments are made according to any contract unless the terms otherwise provide for ;

(b) persons appointed as local candidates ;

(c) persons appointed on consolidated pay or on part-time basis; and

(d) Government Servants who have voluntarily forgone their promotion.

**2. Interpretation**:- In these rules, unless the context otherwise requires,-

(a) "Appointing authority" in relation to a Government servant means,-

(i) the authority empowered to make appointment to the service of which the Government servant is for the time being member or to the grade of the service in which the Government servant is for the time being included ; or

(ii) the authority empowered to make the appointments to the post which the Government servant for the time being holds ; or

(iii) the authority which appointed the Government servant to such service grade or post, as the case may be whichever authority is the highest authority.

(b) "Schedule" means the Schedule appended to these rules.

**3. Grant of time bound advancement and conditions of eligibility-**

The Appointing Authority shall grant to a Government servant who is holding a post carrying Pay scale specified in column (2) of the Schedule the selection time scale of pay specified in the corresponding column (3) thereof if, -

(a) he has put in a service of not less than twelve years in the post held by him excluding his services as a local candidate, work-charged employee or any other service which does not count for the purpose of determining seniority for promotion ; and

(b) he has a satisfactory record of service ; and

(c) he is qualified and eligible for promotion in accordance with the rules of recruitment applicable to him ;

Provided that the suitability for grant of Selection time scale of pay to a Government servant holding a post in any of the scales of pay mentioned in Sl.No.8 to 11 of column (1) of the Schedule shall be determined by the Departmental Promotion Committee, if constituted or by the appointing authority as the case may be :

Provided further that in respect of Group "D" employees holding the scale of pay of Rs.390-550 and the posts specified in Schedule IV of the Karnataka Civil Services (Classification, Control and Appeal) Rules, 1957 possessing of any academic qualification or the passing of the Kannada Language or any service examination shall not be insisted upon for granting the selection time scale of pay :

Provided further that no Government servant shall be allowed the benefit of this rule more than once during his entire service under the Government :

Provided further that a Government Servant,-

(a) who has put in not less than twelve years of service in the post held by him as on 31st March 1982, may be allowed the corresponding selection time scale of pay with effect from 1st April 1982 ;

(b) who has put in not less than twelve years of service in the post held by him on a date on or after 1st April 1982 may be allowed the corresponding selection time scale of pay with effect from such date ;

Provided further that a Government servant who has elected to continue in the "existing scale" under rule 7 of the Karnataka Civil Services (Revised Pay) Rules, 1982, until he earns his next or subsequent increment in the said scale may be granted the selection time scale from the date from which his pay is fixed in the "revised scale" under the said rules :

Provided also that where a Government servant who has exercised his option under rule 7 of the Karnataka Civil Services (Revised Pay) Rules, 1982 to continue in the existing scale till he earns next or any subsequent increment requests for the grant of the selection time scale of pay before the expiry of the period upto which he had elected to continue in the existing scale the option exercised by him shall become invalid and he may be granted the selection time scale of

pay after fixing his pay in the "Revised Scale" as if he had not exercised any option.

**4. Fixation of pay** :- (1) Notwithstanding anything contained in the Karnataka Civil Services Rules the pay of a Government servant who is granted the selection time-scale of pay shall be fixed in accordance with the provisions of rule 42-B, of the K.C.S.Rs :

Provided that for the purpose of fixing the pay under this sub-rule the benefits of fixation at a higher stage of pay and grant of additional increment in pursuance of Government order No.FD 82 SRP 79 dated 22nd January 1980 and Government order No. FD 39 SRP 80 dated 11th December 1980 shall be ignored.

(2) Where a Government servant who has been granted the selection time scale of pay, is promoted within two years from the date on which he is granted the selection time scale of pay, his pay on promotion shall be fixed with reference to the pay which he would have drawn but for the grant of the selection time scale of pay:

Provided that his pay shall not be less than the pay he was drawing immediately before such promotion.

**5. Power to remove difficulties** :-If any difficulty arises in giving effect to the provisions of these rules, the State Government may by order, make such provisions or give such directions not inconsistent with these rules as appears to it to be necessary for removing the difficulty.

**6. Over-riding effect of the rules** :- The provisions of these rules shall have effect notwithstanding anything inconsistent therewith contained in any rules made under the proviso to article 309 of the Constitution of India.

**7. Power to relax** :-Notwithstanding anything contained in these rules the Government may by order dispense with or relax the requirement of any rule to such extent subject to such condition, as may be considered necessary for dealing with a case in just and equitable manner.

8. Savings :- Any action taken under Government order No.FD 88 SRP (CSC) 81, dated 27th March 1982 and Government order No.FD 69 SRP 82, dated 13th August 1982 and 1st January 1983 shall be deemed to have been taken under these rules.

## SCHEDULE

| Sl No. | Scale of pay | Selection time scale of pay |
|---|---|---|
| 1 | 2 | 3 |
| 1 | 390-550 | 410-700 |
| 2 | 410-700 | 490-950 |
| 3 | 490-950 | 550-1050 |
| 4 | 550-1050 | 630-1200 |
| 5 | 630-1200 | 675-1320 |
| 6 | 675-1320 | 750-1500 |
| 7 | 750-1500 | 860-1650 |
| 8 | 860-1650 | 920-1725 |
| 9 | 920-1725 | 950-1800 |
| 10 | 950-1800 | 1050-1950 |
| 11 | 1050-1950 | 1100-2025 |

By Order in the name of the
Governor of Karnataka

M.R. REWANKAR

Under Secretary to Government,
Finance Department (CSC).

27

ಅನುಬಂಧ-02



# FINANCE SECRETARIAT

## NOTIFICATION

## NO. FD 25 SRP 91, BANGALORE, DATED 29TH OCTOBER, 1991.

In exercise of the powers conferred by the proviso to Article 309 of the Constitution of India, the Governor of Karnataka hereby makes the following rules, namely :-

**1. Title, commencement and application.-** (1) These rules may be called the Karnataka Civil Services (Automatic grant of special Promotion to senior scale of pay) Rules, 1991.

(2) They shall be and shall be deemed to have come into force with effect from the first day of June, 1991.

(3) These rules shall apply to all the Government Servants holding the category of posts carrying the scales of pay specified in column (2) of the table below or the selection time scale of pay granted under the Karnataka Civil Services (Time Bound Advancement) Rules, 1983 specified in column (3) thereof, namely :—

**TABLE**

| Sl No. | Scale of Pay | Selection time Scale of Pay |
|---|---|---|
| 1 | 2 | 3 |
| 1 | 780-1040 | 810-1310 |
| 2 | 810-1310 | 870-1600 |
| 3 | 870-1600 | 960-1760 |
| 4 | 960-1760 | 1040-1900 |
| 5 | 1040-1900 | 1190-2200 |
| 6 | 1190-2200 | 1280-2450 |
| 7 | 1280-2450 | 1400-2750 |
| 8 | 1400-2750 | 1600-2990 |

| 1 | 2 | 3 |
|---|---|---|
| 9 | 1600-2990 | 1720-3170 |
| 10 | 1720-3170 | 1760-3350 |
| 11 | 1760-3350 | 1900-3650 |
| 12 | 1900-3650 | 2000-3750 |

(4) These rules shall not apply to.-

(a) persons borne on work charged establishments, with no lien on any post in regular establishments of Civil Services, unless otherwise provided by an order issued by the Government.

(b) persons paid out of contingencies, unless otherwise provided by an order issued by the Government ;

(c) persons paid hourly, daily, weekly or monthly rates, wages;

(d) persons not in whole-time employment ;

(e) persons paid only on a piece-rate basis ;

(f) persons employed on contract, except where the contract provides other wise ;

(g) persons appointed on consolidated pay or salary ;

(h) persons re-employed in Government service after retirement ;

(i) persons who have voluntarily foregone their promotion ;

(j) persons drawing pay in the UGC/AICTE scale of pay ;

(k) persons borne on the All India Services working under the Government ; and

(l) any other class or category of persons whom the Government may, by order, specifically exclude from the operation of all or any of the provisions of these rules.

**2. Definition** ,- In these rules, unless the context otherwise requires:-

(1) "Appointing authority" in relation to a Government servant means :-

(a) The authority empowered to make appointment to the service of which the Government servant is for the time being a member or to the grade of the service in which the Government servant is for the time being included ; or

(b) The authority empowered to make appointment to the post in which the Government servant for the time being holds ; or

(c) The authority which appointed the Government servant to such service, grade or post, as the case may be, whichever authority is the highest authority.

(2) "Government" means the State Government ;

(3) "Government Servant" means a person who is a member of the Civil Services of the State of Karnataka or who holds a civil post in connection with the affairs of the State of Karnataka and includes any person whose services are temporarily placed at the disposal of the Government of India, or the Government of another, State or a local authority ;

(4) "Senior scale of pay" means the scale of the pay next above the selection time scale of pay granted under the Karnataka Civil Services (Time Bound Advancement) Rules, 1983 in respect of the post held by a Government servant or where the selection time scale of pay granted under the Karnataka Civil Services (Time Bound Advancement) Rules, 1983 in respect of the post held by the Government servant and the scale of pay of promotional post is identical or same, the scale of pay of such promotional post.

**3. Grant of special promotion to senior scale of pay.**— The Appointing Authority shall grant to a Government servant who is holding a post carrying scale of pay specified in column (2) or selection time scale of pay granted under the Karnataka Civil Services (Time Bound Advancement) Rules, 1983 in column (3) of the Table under sub-Rule (3) of Rule 1, the senior scale of pay if :—

(a) (i) he has put in a total continuous sevice of not less than fifteen years of service in the same post held by him on the date of commencement of these rules, with effect from the date of such commencement : or

(ii) he completes a total continuous service of not less than fifteen years in the same post held by him on or after the date of commencement of these rules, with effect from the date following the date on which he completes such years of service :

(b) he has satisfactory record of service ; the satisfactory record of service being determined in the same manner as merit is determined for promotion on the basis of seniority-cum-merit ;

(c) he is qualified and eligible for promotion in accordance with the rules of recruitment applicable to the post where there is avenue for promotion.

**4. Computation of service for the purpose of grant of Special Promotion to senior scale of pay.**—Government servant must have put in a continuous service of not less than fifteen years of service in the post held by him excluding his service :—

(i) as local candidate,

(ii) in work charged establishment,

(iii) rendered in the former post or cadre in the department or service consequent on the change in the post or cadre in the department

or service which does not count for the purpose of determining seniority for promotion ; and

(iv) in any other service which does not count for the purpose of determining seniority for promotion in computing the period of 15 years service in the same post.

**Note .-** Only service which will be taken into account for the purpose of determination of seniority under the Karnataka Government Servants (Seniority) Rules, 1957 as in force from time to time, shall be counted for determination of seniority under these rules.

**5. Screening by the Departmental Promotion Committee.-** In case of Government servants holding a post carrying any of the scales of pay at serial number, 9,10,11 and 12 of the Table specified in sub-rule (3) of Rule 1 or the selection time scale of pay specified thereof, grant of special promotion to senior scale of pay under these rules, shall be determined by the Departmental promotion committee, if it has been constituted or in the absence of such a Committee, by the Appointing Authority.

**6. One Time Special Promotion.-** No Government servant shall be eligible for grant of special promotion to senior scales of pay under these rules more than once during the entire service under the Government.

**7. Fixation of Pay.-** Notwithstanding anything contained in the Karnataka Civil Services Rules, the pay of the Government Servant who is granted special promotion to senior scale of pay, be fixed in accordance with the provisions of Rule 42B of the Karnataka Civil Service Rules.

**8. Interpretation.**- If any question arises relating to the interpretation of any of the provisions contained in these rules, it shall be referred to Government in Finance Department for clarification.

**9. Over riding effect of these rules.**- The provisions of these rules shall have effect notwithstanding anything inconsistent therewith contained in any rules made under the proviso to Article 309 of the Constitution of India.

**10. Power to remove difficulties.**- If any difficulty arises in giving effect to the provision of these rules, the State Government may, by order, make such provisions or give such directions not inconsistent with these rules as appears to it be necessary for removing the difficulty.

KHURSHED ALAM KHAN,
Governor of Karnataka

By order and in the name of the
Governor of Karnataka

T.H.NAYAK,
Deputy Secretary to Government
Finance Department (services)

ಅನುಬಂಧ-03

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದೆ 20 ವರ್ಷಗಳು ಅದೇ ಹುದ್ದೆಯಲ್ಲಿರುವ ಸರ್ಕಾರಿ ನೌಕರರಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

---

**ಪ್ರಸ್ತಾವನೆ:**

ಮಾನ್ಯ ಮುಖ್ಯ ಮಂತ್ರಿಗಳು 2002-2003ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯ ವೇತನ ಶ್ರೇಣಿಗಳಲ್ಲಿನ ಮೊದಲ ಹನ್ನೊಂದು ವೇತನ ಶ್ರೇಣಿಗಳಲ್ಲಿ ಹುದ್ದೆಗಳನ್ನು ಹೊಂದಿದ್ದು 20 ವರ್ಷಗಳ ಸೇವಾವಧಿಯಲ್ಲಿ ಒಂದೂ ಪದೋನ್ನತಿಯನ್ನು ಪಡೆಯದ ಸರ್ಕಾರಿ ನೌಕರರಿಗೆ ದಿನಾಂಕ 1-4-2002 ರಿಂದ ಅನ್ವಯವಾಗುವಂತೆ. ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡುವ ಸರ್ಕಾರದ ತೀರ್ಮಾನವನ್ನು ಪ್ರಕಟಿಸಿರುತ್ತಾರೆ. ತದನುಸಾರ ಈ ಕೆಳಕಂಡ ಆದೇಶಗಳನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 13 ಎಸ್‌ಆರ್‌ಪಿ 2002, ಬೆಂಗಳೂರು.**
**ದಿನಾಂಕ: 9ನೇ ಮೇ 2002.**

ಅಂಡಿಕೆ 6(ii) ರಲ್ಲಿ ನಮೂದಿಸಲಾಗಿರುವ ನೌಕರರನ್ನು ಹೊರತುಪಡಿಸಿ ರಾಜ್ಯ ವೇತನ ಶ್ರೇಣಿಗಳಲ್ಲಿ ಈ ಕೆಳಗೆ ನಮೂದಿಸಿರುವ ಮೊದಲ ಹನ್ನೊಂದು ವೇತನ ಶ್ರೇಣಿಗಳಲ್ಲಿ ಯಾವುದೇ ಒಂದು ಹುದ್ದೆಯಲ್ಲಿ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಒಂದೂ ಪದೋನ್ನತಿ ಪಡೆಯದೆ ಮುಂದುವರೆದಿರುವ ಅಥವಾ ಮುಂದುವರೆಯುವ ಸರ್ಕಾರಿ ನೌಕರನಿಗೆ ಆ ಹುದ್ದೆಗೆ ನಿಗಧಿಪಡಿಸಲಾದ ವೇತನ ಶ್ರೇಣಿಯಲ್ಲಿ ಅಥವಾ ಅವನು ಹೊಂದಿರುವ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ, ಆಯಾ ಪ್ರಕರಣಕ್ಕನ್ವಯ, ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ 1-4-2002 ರಿಂದ ಜಾರಿಗೆ ಬರುವಂತೆ ಅಥವಾ ಇಪ್ಪತ್ತು ವರ್ಷಗಳ ಸೇವೆ ಪೂರ್ಣಗೊಳಿಸಿದ ದಿನಾಂಕದಿಂದ, ಇದರಲ್ಲಿ ಯಾವುದು ನಂತರವೋ ಆ ದಿನಾಂಕದಿಂದ ಮಂಜೂರು ಮಾಡತಕ್ಕದ್ದು.

| ಕ್ರ.ಸಂ. | ವೇತನ ಶ್ರೇಣಿ |
|---|---|
| 1 | 2 |
| 1 | 2500-3850 |
| 2 | 2600-4350 |
| 3 | 2775-4950 |
| 4 | 3000-5450 |
| 5 | 3300-6300 |
| 6 | 3850-7050 |
| 7 | 4150-7800 |
| 8 | 4575-8400 |
| 9 | 5200-9580 |
| 10 | 5575-10620 |
| 11 | 6000-11200 |

ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಹಾಗೂ ಅರ್ಹತಾ ಷರತ್ತುಗಳು:

2. ಈ ಕೆಳಕಂಡ ಷರತ್ತುಗಳನ್ನು ಪೂರೈಸಿದಲ್ಲಿ ನೇಮಕಾತಿ ಪ್ರಾಧಿಕಾರವೇ ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಅಧಿಕಾರ ಹೊಂದಿರುತ್ತದೆ:

ಅ) ನೌಕರನು ತೃಪ್ತಿಕರ ಸೇವಾ ದಾಖಲೆ ಹೊಂದಿರಬೇಕು; ತೃಪ್ತಿಕರ ಸೇವೆಯನ್ನು ಜೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಪದೋನ್ನತಿಗೆ ಅರ್ಹತೆ ನಿರ್ಧರಿಸುವ ರೀತಿಯಲ್ಲಿಯೇ ನಿರ್ಧರಿಸತಕ್ಕದು.

ಆ) ಆ ಹುದ್ದೆಗೆ ನೇಮಕಾತಿ ನಿಯಮಗಳಲ್ಲಿ ಪದೋನ್ನತಿಗೆ ಅವಕಾಶ ಕಲ್ಪಿಸಿರುವಲ್ಲಿ, ಪದೋನ್ನತಿಗಾಗಿ ನಿಗಧಿಪಡಿಸಿರುವ ಅರ್ಹತೆಯನ್ನು ಅವರು ಹೊಂದಿರಬೇಕು. ಆದಾಗ್ಯೂ, ಈ ಕೆಳಕಂಡಂತೆ ಸಡಿಲಿಕೆ ಕಲ್ಪಿಸಿದೆ:

(1) ಮೇಲಿನ ಹುದ್ದೆಗೆ ಪದೋನ್ನತಿಗೆ ಶೈಕ್ಷಣಿಕ ಅಥವಾ ವೃತ್ತಿಯ ವಿದ್ಯಾರ್ಹತೆ ನಿಗಧಿಪಡಿಸಿರುವಲ್ಲಿ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗೆ 'ಆ ಅರ್ಹತೆಯನ್ನು ಪಡೆದಿರಲೇಬೇಕೆಂದು ಒತ್ತಾಯಿಸಬಾರದು. ಆದರೆ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ಸರ್ಕಾರಿ ನೌಕರನು ತಾನು ಹೊಂದಿರುವ ಹುದ್ದೆಗೆ ನಿಗಧಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆ ಮತ್ತು ಇಲಾಖಾ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿರಲೇಬೇಕು.

(2) ಗ್ರೂಪ್-ಡಿ ನೌಕರರಿಗೆ ಸಂಬಂಧಿಸಿದಂತೆ, ಶೈಕ್ಷಣಿಕ ವಿದ್ಯಾರ್ಹತೆ ಪಡೆದಿರಬೇಕೆಂದು ಅಥವಾ ಕನ್ನಡ ಭಾಷಾ ಪರೀಕ್ಷೆ ಅಥವಾ ಪದೋನ್ನತಿಗಾಗಿ ನಿಗಧಿಪಡಿಸಿರುವ ಇಲಾಖಾ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಲೇ ಬೇಕೆಂದು ಒತ್ತಾಯಿಸಬಾರದು.

(3) ವಾಹನ ಚಾಲಕರಿಗೆ ಸಂಬಂಧಿಸಿದಂತೆ ಎಸ್.ಎಸ್.ಎಲ್.ಸಿ. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಪದೋನ್ನತಿಗಾಗಿ ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಲೇ ಬೇಕೆಂದು ಒತ್ತಾಯಿಸಬಾರದು.

ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳಬೇಕಾದ ಸೇವೆ:

3. ಈ ಕೆಳಗಿನ ಸೇವೆಯನ್ನು ಹೊರತುಪಡಿಸಿ ಒಬ್ಬ ಸರ್ಕಾರಿ ನೌಕರನು ತಾನು ಹೊಂದಿರುವ ಹುದ್ದೆಯಲ್ಲಿ 20 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸತತ ಸೇವೆ ಸಲ್ಲಿಸಿರಬೇಕು.

(i) ಸ್ಥಳೀಯ ಅಭ್ಯರ್ಥಿ ಸೇವೆ.
(ii) ಕಾರ್ಯಭಾರಿತ ಸಿಬ್ಬಂದಿ ಸೇವೆ.
(iii) ವೃಂದ ಅಥವಾ ಹುದ್ದೆ ಬದಲಾವಣೆಯ ಪರಿಣಾಮವಾಗಿ ಯಾವುದೇ ಇಲಾಖೆ ಅಥವಾ ಸೇವೆಯಲ್ಲಿ ಪದೋನ್ನತಿಗಾಗಿ ಜೇಷ್ಠತೆಯನ್ನು ನಿರ್ಧರಿಸುವ ಉದ್ದೇಶಕ್ಕೆ ಪರಿಗಣಿತವಾಗದ ಒಂದು ಇಲಾಖೆಯ ಹಿಂದಿನ ಹುದ್ದೆ ಅಥವಾ ವೃಂದದಲ್ಲಿ ಸಲ್ಲಿಸಿದ ಸೇವೆ; ಮತ್ತು
(iv) ಒಂದೇ ಹುದ್ದೆಯಲ್ಲಿ 20 ವರ್ಷಗಳ ಸೇವೆಯನ್ನು ಲೆಕ್ಕ ಮಾಡುವಾಗ ಪದೋನ್ನತಿಗಾಗಿ ಜೇಷ್ಠತೆಯನ್ನು ನಿರ್ಧರಿಸುವ ಉದ್ದೇಶಕ್ಕೆ ಪರಿಗಣಿಸಲ್ಪಡದ ಇತರ ಯಾವುದೇ ಸೇವೆ.

ಟಿಪ್ಪಣಿ: ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ನಿಗಧಿತ ಸೇವೆಯನ್ನು ಎಣಿಕೆ ಮಾಡುವಾಗ ಕಾಲಕಾಲಕ್ಕೆ ಜಾರಿಯಲ್ಲಿರುವ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ, 1957 ರನ್ವಯ ಜೇಷ್ಠತೆ ನಿರ್ಧರಿಸುವ ಉದ್ದೇಶಕ್ಕೆ ಪರಿಗಣಿಸಲ್ಪಡುವ ಸೇವೆಯನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

35

ಹೆಚ್ಚುವರಿ ವೇತನ ಬಡ್ತಿಯ ದರ:

4. ಹೆಚ್ಚುವರಿ ವೇತನ ಬಡ್ತಿಯನ್ನು ಈ ಕೆಳಕಂಡಂತೆ ಪಾವತಿ ಮಾಡಿ ಕ್ರಮಗೊಳಿಸತಕ್ಕದ್ದು:

(i) ಹೆಚ್ಚುವರಿ ವೇತನ ಬಡ್ತಿಯನ್ನು ಸರ್ಕಾರಿ ನೌಕರನು ಹೊಂದಿರುವ ವೇತನ ಶ್ರೇಣಿಯಲ್ಲಿ ಅವನಿಗೆ ಲಭ್ಯವಾಗುವ ಮುಂದಿನ ವಾರ್ಷಿಕ ವೇತನ ಬಡ್ತಿಯ ದರದಲ್ಲಿ ನೀಡತಕ್ಕದ್ದು.

(ii) ಸರ್ಕಾರಿ ನೌಕರನು ಕಾಲಿಕ ವೇತನ ಶ್ರೇಣಿಯಲ್ಲಿ ಗರಿಷ್ಠ ಹಂತವನ್ನು ತಲುಪಿದ್ದಲ್ಲಿ ಅಥವಾ ಅವನಿಗೆ ಸ್ಥಗಿತ ವೇತನ ಬಡ್ತಿ/ಬಡ್ತಿಗಳನ್ನು ಮಂಜೂರು ಮಾಡಿದ್ದಲ್ಲಿ, ಹೆಚ್ಚುವರಿ ವೇತನ ಬಡ್ತಿಯನ್ನು ಅವನು ಕಡೆಯದಾಗಿ ಪಡೆದ ವಾರ್ಷಿಕ ವೇತನ ಬಡ್ತಿಯ ದರದಲ್ಲಿ ಕಾಲಿಕ ವೇತನ ಶ್ರೇಣಿಯ ಗರಿಷ್ಠ ಹಂತ ಮೀರಿ ಮಂಜೂರು ಮಾಡತಕ್ಕದ್ದು ಮತ್ತು ಅದನ್ನು 'ವೈಯಕ್ತಿಕ ವೇತನ' ಎಂದು ಪರಿಗಣಿಸತಕ್ಕದ್ದು.

(iii) ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿದ ಪರಿಣಾಮವಾಗಿ ಸರ್ಕಾರಿ ನೌಕರನು ಕಾಲಿಕ ವೇತನ ಶ್ರೇಣಿಯಲ್ಲಿ ಗರಿಷ್ಠ ಹಂತ ತಲುಪಿದಲ್ಲಿ, ಅವನು ಕಡೆಯದಾಗಿ ಪಡೆದ ವಾರ್ಷಿಕ ವೇತನ ಬಡ್ತಿಯ ದರಕ್ಕೆ ಸಮನಾಗಿ ವಾರ್ಷಿಕ ವೇತನ ಬಡ್ತಿಯನ್ನು ಕಾಲಿಕ ವೇತನ ಶ್ರೇಣಿಯಲ್ಲಿ ಅದು ಬಾಕಿ ಇರುವ ದಿನಾಂಕದಿಂದ ಪಡೆಯಲು ಹಕ್ಕುಳ್ಳವನಾಗಿರುತ್ತಾನೆ ಮತ್ತು ಮಂಜೂರು ಮಾಡಲಾದ ಹೆಚ್ಚುವರಿ ವೇತನ ಬಡ್ತಿಯನ್ನು 'ವೈಯಕ್ತಿಕ ವೇತನ' ಎಂದು ಪರಿಗಣಿಸತಕ್ಕದ್ದು.

ಟಿಪ್ಪಣಿ: ಈ ಆದೇಶದನ್ವಯ ಮಂಜೂರು ಮಾಡಲಾದ ಹೆಚ್ಚುವರಿ ವೇತನ ಬಡ್ತಿಯ ಪರಿಣಾಮದಿಂದ ಉದ್ಭವಿಸಿದ 'ವೈಯಕ್ತಿಕ ವೇತನ'ವನ್ನು ವೇತನ ಶ್ರೇಣಿಗಳ ಪರಿಷ್ಕರಣೆ ಮತ್ತು ಪದೋನ್ನತಿ ನಂತರದ ವೇತನ ನಿಗದಿ ಸೇರಿದಂತೆ ಎಲ್ಲಾ ಉದ್ದೇಶಗಳಿಗೆ ಮೂಲ ವೇತನ ಎಂದು ಪರಿಗಣಿಸತಕ್ಕದ್ದು.

ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಒಂದು ಬಾರಿ ಮಾತ್ರ:

5. ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿಯನ್ನು ಸರ್ಕಾರಿ ನೌಕರನು ಸರ್ಕಾರದಲ್ಲಿ ಸಲ್ಲಿಸುವ ತನ್ನ ಇಡೀ ಸೇವಾ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಪಡೆಯಲು ಅರ್ಹನಾಗುವುದಿಲ್ಲ.

ಅನ್ವಯಿಸುವಿಕೆ:

6 (i) ಕಂಡಿಕೆ 2 ರಲ್ಲಿರುವ ಉಪಬಂಧಗಳಿಗೆ ಒಳಪಟ್ಟು, ಈ ಆದೇಶಗಳು ಯಾರ ಸೇವಾ ಷರತ್ತುಗಳು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ಉಪಬಂಧಗಳಿಗೆ ಒಳಪಡುತ್ತವೋ ಆ ಎಲ್ಲಾ ಸರ್ಕಾರಿ ನೌಕರರಿಗೂ ಅನ್ವಯವಾಗುತ್ತವೆ.

6 (ii) ಈ ಆದೇಶಗಳು ಇವರಿಗೆ ಅನ್ವಯವಾಗತಕ್ಕದ್ದಲ್ಲ:

(ಅ) ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಪ್ರಾಥಮಿಕ/ಪ್ರೌಢ ಶಾಲೆಗಳ ಎಲ್ಲಾ ವರ್ಗದ ಶಿಕ್ಷಕರು ಮತ್ತು ಪದವಿಪೂರ್ವ ಕಾಲೇಜುಗಳ (ಕಿರಿಯ ಕಾಲೇಜುಗಳ) ಉಪನ್ಯಾಸಕರುಗಳಿಗೆ.

(ಆ) ಈಗಾಗಲೇ ಕನಿಷ್ಠ ಒಂದು ಪದೋನ್ನತಿ ಪಡೆದಿರುವ ಸರ್ಕಾರಿ ನೌಕರರಿಗೆ.

(ಇ) ಕಾರ್ಯಭೃತ ಸಿಬ್ಬಂದಿ ವರ್ಗಕ್ಕೆ ಸೇರಿದವರಿಗೆ.

(ಈ) ಸಾದಿಲ್ವಾರು ನಿಧಿಯಿಂದ ಸಂಬಳ ನೀಡಲಾಗುತ್ತಿರುವವರಿಗೆ.

(ಉ) ಸ್ಥಳೀಯ ಅಭ್ಯರ್ಥಿಗಳಾಗಿ ನೇಮಕಾತಿಗೊಂಡವರಿಗೆ.
(ಊ) ಸಂಚಿತ ವೇತನ ಅಥವಾ ಅರೆಕಾಲಿಕ ಆಧಾರದ ಮೇರೆಗೆ ನೇಮಕಾತಿಗೊಂಡವರಿಗೆ.
(ಋ) ಸ್ವಇಚ್ಛೆಯಿಂದ ತಮ್ಮ ಪದೋನ್ನತಿಯನ್ನು ಬಿಟ್ಟುಕೊಟ್ಟ ಸರ್ಕಾರಿ ನೌಕರರಿಗೆ.
(ೠ) ಸರ್ಕಾರವು, ತನ್ನ ಆದೇಶದ ಮುಖಾಂತರ, ಈ ಆದೇಶಗಳ ಕಾರ್ಯಾಚರಣೆಯಿಂದ ನಿರ್ದಿಷ್ಟವಾಗಿ ಹೊರತುಪಡಿಸಬಹುದಾದ ಯಾವುದೇ ಇತರ ವರ್ಗ ಅಥವಾ ಪ್ರವರ್ಗದ ವ್ಯಕ್ತಿಗಳಿಗೆ.

7. ಈ ಆದೇಶಗಳು 2002ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುತ್ತದೆ.

8. ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿ ಹೊರಡಿಸಿದ ಆದೇಶದ ಪ್ರತಿಯನ್ನು ಆರ್ಥಿಕ ಇಲಾಖೆ (ಸೇವೆಗಳು-2) ಮತ್ತು ಸಂಬಂಧಿಸಿದ ಆಡಳಿತ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರಿಗೆ ಕಳುಹಿಸಿ ಕೊಡತಕ್ಕದ್ದು.

ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಕೆ.ಆರ್.ರಾಮದುರ್ಗ್)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-2).

ಇವರಿಗೆ,

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು /ಪ್ರಧಾನ ಕಾರ್ಯದರ್ಶಿಗಳು /ಕಾರ್ಯದರ್ಶಿಗಳು.
2. ವಿಭಾಗಾಧಿಕಾರಿಗಳು.
3. ಇಲಾಖಾ ಮುಖ್ಯಸ್ಥರುಗಳು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ)(ಜಿ.ಎಂ.ಶಾಖೆ), ಕರ್ನಾಟಕ, ಬೆಂಗಳೂರು.
7. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
8. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
9. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
12. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
13. ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ.
14. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
15. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
16. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
17. ವಾರಪತ್ರ,
18. ಶಾಖೆಯ ರಕ್ಷಾ ಕಡತ.

ಕ್ರಮ ಸಂಖ್ಯೆ: 7,8,9,10,11 ಮತ್ತು 12ರಲ್ಲಿ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ.

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು - ೫೮

## ಕರ್ನಾಟಕ ಸರ್ಕಾರದ ನಡವಳಿ

ವಿಷಯ:- ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದೆ 25 ಮತ್ತು 30 ವರ್ಷಗಳು ಅದೇ ಹುದ್ದೆಯಲ್ಲಿ ಮುಂದುವರಿದಿರುವ ಸರ್ಕಾರಿ ನೌಕರರಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 13 ಎಸ್‌ಆರ್‌ಪಿ 2002 ದಿನಾಂಕ 09-05-2002

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 09-05-2002ರ ಸರ್ಕಾರಿ ಆದೇಶದನ್ವಯ, ಸದರಿ ಆದೇಶದ ಕಂಡಿಕೆ 6(ii) ರಲ್ಲಿ ನಮೂದಿಸಲಾಗಿರುವ ನೌಕರರನ್ನು ಹೊರತುಪಡಿಸಿ ರಾಜ್ಯ ವೇತನ ಶ್ರೇಣಿಗಳಲ್ಲಿನ ಮೊದಲ 11 ವೇತನ ಶ್ರೇಣಿಗಳಲ್ಲಿ ಯಾವುದೇ ಒಂದು ಹುದ್ದೆಯಲ್ಲಿ ಇಪ್ಪತ್ತು ವರ್ಷಗಳ ಕಾಲ ಒಂದೂ ಪದೋನ್ನತಿ ಪಡೆಯದೆ ಮುಂದುವರಿಯುವ ಸರ್ಕಾರಿ ನೌಕರನಿಗೆ ಆ ಹುದ್ದೆಗೆ ನಿಗಧಿಪಡಿಸಲಾದ ವೇತನ ಶ್ರೇಣಿಯಲ್ಲಿ ಅಥವಾ ಅವನು ಹೊಂದಿರುವ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ ಆಯಾ ಪ್ರಕರಣದನ್ವಯ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ 1-4-2002 ರಿಂದ ಜಾರಿಗೆ ಬರುವಂತೆ ಅಥವಾ ಇಪ್ಪತ್ತು ವರ್ಷಗಳ ಸೇವೆ ಪೂರ್ಣಗೊಳಿಸುವ ದಿನಾಂಕದಿಂದ ಇದರಲ್ಲಿ ಯಾವುದು ನಂತರವೋ ಆ ದಿನಾಂಕದಿಂದ ಮಂಜೂರು ಮಾಡಲು ಅವಕಾಶವಿರುತ್ತದೆ. ಪ್ರಸ್ತುತ ಈ ಸೌಲಭ್ಯವು ರಾಜ್ಯ ವೇತನ ಶ್ರೇಣಿಯಲ್ಲಿನ ಮೊದಲ 15 ವೇತನ ಶ್ರೇಣಿಯಲ್ಲಿರುವ ಸರ್ಕಾರಿ ನೌಕರರಿಗೆ ಲಭ್ಯವಿರುತ್ತದೆ.

2011ರ ಅಧಿಕಾರಿ ವೇತನ ಸಮಿತಿಯು ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದೆ ಇಪ್ಪತ್ತೈದು ವರ್ಷಗಳ ಕಾಲ ಅದೇ ಹುದ್ದೆಯಲ್ಲಿ ಮುಂದುವರಿಯುವ ಸರ್ಕಾರಿ ನೌಕರನಿಗೆ 2ನೇ ಹೆಚ್ಚುವರಿ ವೇತನ ಬಡ್ತಿಯ ಸೌಲಭ್ಯವನ್ನು ಹಾಗೂ ಮೂವತ್ತು ವರ್ಷಗಳ ಕಾಲ ಒಂದೂ ಪದೋನ್ನತಿ ಪಡೆಯದೆ ಮುಂದುವರೆಯುವ ಸರ್ಕಾರಿ ನೌಕರನಿಗೆ 3ನೇ ಹೆಚ್ಚುವರಿ ವೇತನ ಬಡ್ತಿಯ ಸೌಲಭ್ಯವನ್ನು ಮಂಜೂರು ಮಾಡಲು ಮಾಡಿರುವ ಶಿಫಾರಸ್ಸನ್ನು ಸರ್ಕಾರವು ಒಪ್ಪಿಕೊಂಡಿರುತ್ತದೆ ಮತ್ತು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012 (VIII)**
**ಬೆಂಗಳೂರು, ದಿನಾಂಕ 14ನೇ ಜೂನ್ 2012**

ಕಂಡಿಕೆ 6(ii) ರಲ್ಲಿ ನಮೂದಿಸಲಾಗಿರುವ ನೌಕರರನ್ನು ಹೊರತುಪಡಿಸಿ ರಾಜ್ಯ ವೇತನ ಶ್ರೇಣಿಗಳಲ್ಲಿನ ಮೊದಲ 15 ಶ್ರೇಣಿಗಳಲ್ಲಿರುವ ಯಾವುದೇ ಒಂದು ಹುದ್ದೆಯಲ್ಲಿ ಇಪ್ಪತ್ತೈದು ವರ್ಷಗಳ ಕಾಲ ಒಂದೂ ಪದೋನ್ನತಿ ಪಡೆಯದೆ ಮುಂದುವರಿದಿರುವ ಅಥವಾ ಮುಂದುವರಿಯುವ ಸರ್ಕಾರಿ ನೌಕರನಿಗೆ ಆ ಹುದ್ದೆಗೆ ನಿಗದಿಪಡಿಸಲಾದ ವೇತನ ಶ್ರೇಣಿಯಲ್ಲಿ ಅಥವಾ ಅವನು ಹೊಂದಿರುವ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ, ಆಯಾ ಪ್ರಕರಣಕ್ಕನ್ವಯ, 2ನೇ ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ **1ನೇ ಏಪ್ರಿಲ್ 2012** ರಿಂದ ಜಾರಿಗೆ ಬರುವಂತೆ ಅಥವಾ 25 ವರ್ಷಗಳ ಸೇವೆ ಪೂರ್ಣಗೊಳಿಸಿದ ದಿನಾಂಕದಿಂದ, ಇದರಲ್ಲಿ ಯಾವುದು ನಂತರವೋ, ಆ ದಿನಾಂಕದಿಂದ ಮಂಜೂರು ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಕಂಡಿಕೆ 6(ii) ರಲ್ಲಿ ನಮೂದಿಸಲಾಗಿರುವ ನೌಕರರನ್ನು ಹೊರತುಪಡಿಸಿ ,ರಾಜ್ಯ ವೇತನ ಶ್ರೇಣಿಗಳಲ್ಲಿನ ಮೊದಲ 15 ಶ್ರೇಣಿಗಳಲ್ಲಿರುವ ಯಾವುದೇ ಒಂದು ಹುದ್ದೆಯಲ್ಲಿ ಮೂವತ್ತು ವರ್ಷಗಳ ಕಾಲ ಒಂದೂ ಪದೋನ್ನತಿ ಪಡೆಯದೆ ಮುಂದುವರಿದಿರುವ ಅಥವಾ ಮುಂದುವರಿಯುವ ಸರ್ಕಾರಿ ನೌಕರನಿಗೆ ಆ ಹುದ್ದೆಗೆ ನಿಗದಿಪಡಿಸಲಾದ ವೇತನ ಶ್ರೇಣಿಯಲ್ಲಿ ಅಥವಾ ಅವನು ಹೊಂದಿರುವ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ, ಆಯಾ ಪ್ರಕರಣಕ್ಕನ್ವಯ, 3ನೇ ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ **1ನೇ ಏಪ್ರಿಲ್ 2012** ರಿಂದ ಜಾರಿಗೆ ಬರುವಂತೆ ಅಥವಾ 30 ವರ್ಷಗಳ ಸೇವೆ ಪೂರ್ಣಗೊಳಿಸಿದ ದಿನಾಂಕದಿಂದ, ಇದರಲ್ಲಿ ಯಾವುದು ನಂತರವೋ, ಆ ದಿನಾಂಕದಿಂದ ಮಂಜೂರು ಮಾಡಲು ಸರ್ಕಾರವು ಹರ್ಷಿಸುತ್ತದೆ.

(38)

**ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಹಾಗೂ ಅರ್ಹತಾ ಷರತ್ತುಗಳು:**

3. ಈ ಕೆಳಕಂಡ ಷರತ್ತುಗಳನ್ನು ಪೂರೈಸಿದಲ್ಲಿ ನೇಮಕಾತಿ ಪ್ರಾಧಿಕಾರವೇ ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಅಧಿಕಾರ ಹೊಂದಿರುತ್ತದೆ:

ಅ) ನೌಕರನು ತೃಪ್ತಿಕರ ಸೇವಾ ದಾಖಲೆ ಹೊಂದಿರಬೇಕು. ತೃಪ್ತಿಕರ ಸೇವೆಯನ್ನು ಜೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಪದೋನ್ನತಿಗೆ ಅರ್ಹತೆ ನಿರ್ಧರಿಸುವ ರೀತಿಯಲ್ಲಿಯೇ ನಿರ್ಧರಿಸತಕ್ಕದ್ದು.

ಆ) ಆ ಹುದ್ದೆಗೆ ನೇಮಕಾತಿ ನಿಯಮಗಳಲ್ಲಿ ಪದೋನ್ನತಿಗೆ ಅವಕಾಶ ಕಲ್ಪಿಸಿರುವಲ್ಲಿ, ಪದೋನ್ನತಿಗಾಗಿ ನಿಗಧಿಪಡಿಸಿರುವ ಅರ್ಹತೆಯನ್ನು ಅವರು ಹೊಂದಿರಬೇಕು. ಆದಾಗ್ಯೂ ಈ ಕೆಳಕಂಡಂತೆ ಸಡಿಲಿಕೆ ಕಲ್ಪಿಸಿದೆ:

(1) ಮೇಲಿನ ಹುದ್ದೆಗೆ ಪದೋನ್ನತಿಗೆ ಶೈಕ್ಷಣಿಕ ಅಥವಾ ವೃತ್ತೀಯ ವಿದ್ಯಾರ್ಹತೆ ನಿಗಧಿಪಡಿಸಿರುವಲ್ಲಿ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗೆ ಆ ಅರ್ಹತೆಯನ್ನು ಪಡೆದಿರಲೇಬೇಕೆಂದು ಒತ್ತಾಯಿಸಬಾರದು. ಆದರೆ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ಸರ್ಕಾರಿ ನೌಕರನು ತಾನು ಹೊಂದಿರುವ ಹುದ್ದೆಗೆ ನಿಗಧಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆ ಮತ್ತು ಇಲಾಖಾ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿರಲೇಬೇಕು.

(2) ಗ್ರೂಪ್–ಡಿ ನೌಕರರಿಗೆ ಸಂಬಂಧಿಸಿದಂತೆ, ಶೈಕ್ಷಣಿಕ ವಿದ್ಯಾರ್ಹತೆ ಪಡೆದಿರಬೇಕೆಂದು ಅಥವಾ ಕನ್ನಡ ಭಾಷಾ ಪರೀಕ್ಷೆ ಅಥವಾ ಪದೋನ್ನತಿಗಾಗಿ ನಿಗಧಿಪಡಿಸಿರುವ ಇಲಾಖಾ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಲೇ ಬೇಕೆಂದು ಒತ್ತಾಯಿಸಬಾರದು.

(3) ವಾಹನ ಚಾಲಕರಿಗೆ ಸಂಬಂಧಿಸಿದಂತೆ ಎಸ್.ಎಸ್.ಎಲ್.ಸಿ. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಪದೋನ್ನತಿಗಾಗಿ ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಲೇ ಬೇಕೆಂದು ಒತ್ತಾಯಿಸಬಾರದು.

**ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳಬೇಕಾದ ಸೇವೆ:**

4. ಈ ಕೆಳಗಿನ ಸೇವೆಯನ್ನು ಹೊರತುಪಡಿಸಿ ಒಬ್ಬ ಸರ್ಕಾರಿ ನೌಕರನು ತಾನು ಹೊಂದಿರುವ ಹುದ್ದೆಯಲ್ಲಿ 25 ಅಥವಾ 30 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸತತ ಸೇವೆ ಸಲ್ಲಿಸಿರಬೇಕು.

(i) ಸ್ಥಳೀಯ ಅಭ್ಯರ್ಥಿ ಸೇವೆ.

(ii) ಕಾರ್ಯಭೃತ ಸಿಬ್ಬಂದಿ ಸೇವೆ.

(iii) ವೃಂದ ಅಥವಾ ಹುದ್ದೆ ಬದಲಾವಣೆಯ ಪರಿಣಾಮವಾಗಿ ಯಾವುದೇ ಇಲಾಖೆ ಅಥವಾ ಸೇವೆಯಲ್ಲಿ ಪದೋನ್ನತಿಗಾಗಿ ಜೇಷ್ಠತೆಯನ್ನು ನಿರ್ಧರಿಸುವ ಉದ್ದೇಶಕ್ಕೆ ಪರಿಗಣಿತವಾಗದ ಒಂದು ಇಲಾಖೆಯ ಹಿಂದಿನ ಹುದ್ದೆ ಅಥವಾ ವೃಂದದಲ್ಲಿ ಸಲ್ಲಿಸಿದ ಸೇವೆ ; ಮತ್ತು

(iv) ಒಂದೇ ಹುದ್ದೆಯಲ್ಲಿ 25 ಅಥವಾ 30 ವರ್ಷಗಳ ಸೇವೆಯನ್ನು ಲೆಕ್ಕ ಮಾಡುವಾಗ ಪದೋನ್ನತಿಗಾಗಿ ಜೇಷ್ಠತೆಯನ್ನು ನಿರ್ಧರಿಸುವ ಉದ್ದೇಶಕ್ಕೆ ಪರಿಗಣಿಸಲ್ಪಡದ ಇತರ ಯಾವುದೇ ಸೇವೆ.

<u>ಟಿಪ್ಪಣಿ:</u> ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ನಿಗದಿತ ಸೇವೆಯನ್ನು ಎಣಿಕೆ ಮಾಡುವಾಗ ಕಾಲಕಾಲಕ್ಕೆ ಜಾರಿಯಲ್ಲಿರುವ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ, 1957 ರನ್ವಯ ಜೇಷ್ಠತೆ ನಿರ್ಧರಿಸುವ ಉದ್ದೇಶಕ್ಕೆ ಪರಿಗಣಿಸಲ್ಪಡುವ ಸೇವೆಯನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

ಹೆಚ್ಚುವರಿ ವೇತನ ಬಡ್ತಿಯ ದರ:

5 ಹೆಚ್ಚುವರಿ ವೇತನ ಬಡ್ತಿಯನ್ನು ಈ ಕೆಳಕಂಡಂತೆ ಪಾವತಿ ಮಾಡಿ ಕ್ರಮಗೊಳಿಸತಕ್ಕದ್ದು:

(i) ಹೆಚ್ಚುವರಿ ವೇತನ ಬಡ್ತಿಯನ್ನು ಸರ್ಕಾರಿ ನೌಕರನು ಹೊಂದಿರುವ ವೇತನ ಶ್ರೇಣಿಯಲ್ಲಿ ಅವನಿಗೆ ಲಭ್ಯವಾಗುವ ಮುಂದಿನ ವಾರ್ಷಿಕ ವೇತನ ಬಡ್ತಿಯ ದರದಲ್ಲಿ ನೀಡತಕ್ಕದ್ದು.

(ii) ಸರ್ಕಾರಿ ನೌಕರನು ಕಾಲಿಕ ವೇತನ ಶ್ರೇಣಿಯಲ್ಲಿ ಗರಿಷ್ಠ ಹಂತವನ್ನು ತಲುಪಿದ್ದಲ್ಲಿ ಅಥವಾ ಅವನಿಗೆ ಸ್ಥಗಿತ ವೇತನ ಬಡ್ತಿ/ಬಡ್ತಿಗಳನ್ನು ಮಂಜೂರು ಮಾಡಿದ್ದಲ್ಲಿ, ಹೆಚ್ಚುವರಿ ವೇತನ ಬಡ್ತಿಯನ್ನು ಅವನು ಕಡೆಯದಾಗಿ ಪಡೆದ ವಾರ್ಷಿಕ ವೇತನ ಬಡ್ತಿಯ ದರದಲ್ಲಿ ಕಾಲಿಕ ವೇತನ ಶ್ರೇಣಿಯ ಗರಿಷ್ಠ ಹಂತ ಮೀರಿ ಮಂಜೂರು ಮಾಡತಕ್ಕದ್ದು ಮತ್ತು ಅದನ್ನು 'ವೈಯಕ್ತಿಕ ವೇತನ' ಎಂದು ಪರಿಗಣಿಸತಕ್ಕದ್ದು.

(iii) ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿದ ಪರಿಣಾಮವಾಗಿ ಸರ್ಕಾರಿ ನೌಕರನು ಕಾಲಿಕ ವೇತನ ಶ್ರೇಣಿಯಲ್ಲಿ ಗರಿಷ್ಠ ಹಂತ ತಲುಪಿದಲ್ಲಿ, ಅವನು ಕಡೆಯದಾಗಿ ಪಡೆದ ವಾರ್ಷಿಕ ವೇತನ ಬಡ್ತಿಯ ದರಕ್ಕೆ ಸಮನಾಗಿ ವಾರ್ಷಿಕ ವೇತನ ಬಡ್ತಿಯನ್ನು ಕಾಲಿಕ ವೇತನ ಶ್ರೇಣಿಯಲ್ಲಿ ಅದು ಲಭ್ಯವಿರುವ ದಿನಾಂಕದಿಂದ ಪಡೆಯಲು ಹಕ್ಕುಳ್ಳವನಾಗಿರುತ್ತಾನೆ ಮತ್ತು ಮಂಜೂರು ಮಾಡಲಾದ ಹೆಚ್ಚುವರಿ ವೇತನ ಬಡ್ತಿಯನ್ನು 'ವೈಯಕ್ತಿಕ ವೇತನ' ಎಂದು ಪರಿಗಣಿಸತಕ್ಕದ್ದು.

**ಟಿಪ್ಪಣಿ:** ಈ ಆದೇಶದನ್ವಯ ಮಂಜೂರು ಮಾಡಲಾದ ಹೆಚ್ಚುವರಿ ವೇತನ ಬಡ್ತಿಯ ಪರಿಣಾಮದಿಂದ ಉದ್ಭವಿಸಿದ 'ವೈಯಕ್ತಿಕ ವೇತನ' ವನ್ನು ವೇತನ ಶ್ರೇಣಿಗಳ ಪರಿಷ್ಕರಣೆ ಮತ್ತು ಪದೋನ್ನತಿ ಮೇರೆಗೆ ವೇತನ ನಿಗದಿ ಸೇರಿದಂತೆ ಎಲ್ಲಾ ಉದ್ದೇಶಗಳಿಗೆ ಮೂಲ ವೇತನ ಎಂದು ಪರಿಗಣಿಸತಕ್ಕದ್ದು.

ಅನ್ವಯಿಸುವಿಕೆ:

6(i) ಕಂಡಿಕೆ 2 ರಲ್ಲಿರುವ ಉಪಬಂಧಗಳಿಗೆ ಒಳಪಟ್ಟು, ಈ ಆದೇಶಗಳು ಯಾರ ಸೇವಾ ಷರತ್ತುಗಳು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ಉಪಬಂಧಗಳಿಗೆ ಒಳಪಡುತ್ತವೋ ಆ ಎಲ್ಲಾ ಸರ್ಕಾರಿ ನೌಕರರಿಗೂ ಅನ್ವಯವಾಗುತ್ತವೆ.

6(ii) ಈ ಆದೇಶಗಳು ಇವರಿಗೆ ಅನ್ವಯವಾಗತಕ್ಕದ್ದಲ್ಲ:

(ಅ) ಈಗಾಗಲೇ ಕನಿಷ್ಠ ಒಂದು ಪದೋನ್ನತಿ ಪಡೆದಿರುವ ಸರ್ಕಾರಿ ನೌಕರರಿಗೆ.
(ಆ) ಕಾರ್ಯಭೃತ ಸಿಬ್ಬಂದಿ ವರ್ಗಕ್ಕೆ ಸೇರಿದವರಿಗೆ.
(ಇ) ಸಾದಿಲ್ವಾರು ನಿಧಿಯಿಂದ ಸಂಬಳ ನೀಡಲಾಗುತ್ತಿರುವವರಿಗೆ.
(ಈ) ಸ್ಥಳೀಯ ಅಭ್ಯರ್ಥಿಗಳಾಗಿ ನೇಮಕಾತಿಗೊಂಡವರಿಗೆ.
(ಉ) ಸಂಚಿತ ವೇತನ ಅಥವಾ ಅರೆಕಾಲಿಕ ಆಧಾರದ ಮೇರೆಗೆ ನೇಮಕಾತಿಗೊಂಡವರಿಗೆ.
(ಊ) ಸ್ವಇಚ್ಛೆಯಿಂದ ತಮ್ಮ ಪದೋನ್ನತಿಯನ್ನು ಬಿಟ್ಟುಕೊಟ್ಟ ಸರ್ಕಾರಿ ನೌಕರರಿಗೆ.
(ಋ) ಸರ್ಕಾರವು, ತನ್ನ ಆದೇಶದ ಮುಖಾಂತರ, ಈ ಆದೇಶಗಳ ಕಾರ್ಯಾಚರಣೆಯಿಂದ ನಿರ್ದಿಷ್ಟವಾಗಿ ಹೊರತುಪಡಿಸಬಹುದಾದ ಯಾವುದೇ ಇತರ ವರ್ಗ ಅಥವಾ ಪ್ರವರ್ಗದ ವ್ಯಕ್ತಿಗಳಿಗೆ.

7. ಈ ಆದೇಶಗಳು 2012ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುತ್ತದೆ.

8. ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿ ಹೊರಡಿಸಿದ ಆದೇಶದ ಪ್ರತಿಯನ್ನು ಆರ್ಥಿಕ ಇಲಾಖೆ (ಸೇವೆಗಳು-2) ಮತ್ತು ಸಂಬಂಧಿಸಿದ ಆಡಳಿತ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸುಂದರ ರಾಜ ಗುಪ್ತ)
ಸರ್ಕಾರದ ಉಪಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-2)

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 300 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು
2. ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಇಲಾಖಾ ಮುಖ್ಯಾಧಿಕಾರಿಗಳು
4. ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗ
6. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
8. ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
9. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
14. ಕಾರ್ಯದರ್ಶಿ. ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
15. ಕಾರ್ಯದರ್ಶಿ, ಅಧಿಕಾರಿ ವೇತನ ಸಮಿತಿ.
16. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
17. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
18. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
19. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
20. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
21. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
22. ವಾರಪತ್ರ/ಶಾಖೆಯ ರಕ್ಷಾ ಕಡತ.

ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ **www.finance.kar.nic.in** ವೀಕ್ಷಿಸಿ.

ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 55 ಎಸ್ ಪಿಬಿ ಸಿಪಿ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:01/08/2025.

ಇವರಿಂದ:-
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
6ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ:-
ನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ),
ಮಲ್ಲೇಶ್ವರಂ,18ನೇ ಕ್ರಾಸ್,
ಬೆಂಗಳೂರು - 560 012.

ಮಾನ್ಯರೇ,

ವಿಷಯ: ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕ ವೃಂದದಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಬಡ್ತಿ ಪಡೆದ ಉಪನ್ಯಾಸಕರಿಗೆ 10,15,20, 25 ಮತ್ತು 30 ವರ್ಷಗಳ ಕಾಲಮಿತಿ ಬಡ್ತಿಗಳನ್ನು ನೀಡದ ಕಾರಣ ಆಗುತ್ತಿರುವ ವೇತನ ತಾರತಮ್ಯ ಸರಿಪಡಿಸುವ ಬಗ್ಗೆ.

ಉಲ್ಲೇಖ: ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 01 ಎಸ್ ಆರ್ ಪಿ 2025, ದಿನಾಂಕ:11.07.2025.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರ್ಥಿಕ ಇಲಾಖೆಯ ಉಲ್ಲೇಖಿತ ಟಿಪ್ಪಣಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಟಿಪ್ಪಣಿಯಲ್ಲಿ ತಿಳಿಸಿರುವ ಬಗ್ಗೆ, ನಿಯಮಾನುಸಾರ ಅಗತ್ಯ ಕ್ರಮವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

(ಪದ್ಮಿನಿ ಎಸ್.ಎನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
(ಪದವಿ ಪೂರ್ವ ಶಿಕ್ಷಣ).

ಸಂ: ಆಇ 01 ಎಸ್‌ಆರ್‌ಪಿ 2025

ಇಪಿ 55 ಎಸ್‌ಹೆಚ್‌ಹೆಚ್ 2022

ಆರ್ಥಿಕ ಇಲಾಖೆ (ಸೇವೆಗಳು-2)

ದಿನಾಂಕ: 11.07.2025

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಸ್ತಾವನೆಯು, ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಗೆ ಮುಂಬಡ್ತಿ ಹೊಂದಿದ, ಶಿಕ್ಷಕರ ವೇತನದಲ್ಲಿನ ತಾರತಮ್ಯವನ್ನು ಸರಿಪಡಿಸಲು ಆರ್ಥಿಕ ಇಲಾಖೆಯ ಮಾರ್ಗದರ್ಶನ ಕೋರಿರುವ ಕುರಿತಾಗಿರುತ್ತದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ, ಆಡಳಿತ ಇಲಾಖೆಯ ಕಡತ ಮತ್ತು ಲಗತ್ತಿಸಿರುವ ದಾಖಲೆಗಳು, ಚಾಲ್ತಿಯಲ್ಲಿರುವ ಸೇವಾ ನಿಯಮಗಳು ಮತ್ತು ಪದೋನ್ನತಿ ಹೊಂದಿದ ಶಿಕ್ಷಕರುಗಳ ವೇತನ ಅಸಮಾನತೆಯ ಕುರಿತಂತೆ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸು ಮತ್ತು ಶಿಫಾರಸ್ಸಿನ ಮೇಲೆ ರಾಜ್ಯ ಸರ್ಕಾರವು ಕೈಗೊಂಡ ನಿರ್ಣಯ ಹಾಗೂ ಈ ಕುರಿತಂತೆ 7ನೇ ರಾಜ್ಯ ವೇತನ ಆಯೋಗವು ರಾಜ್ಯ ಸರ್ಕಾರಕ್ಕೆ ಮಾಡಿರುವ ಶಿಫಾರಸ್ಸುಗಳ ಮಾಹಿತಿಗಳ ಬೆಳಕಿನಲ್ಲಿ ಪ್ರಕರಣವನ್ನು ಆಮೂಲಾಗ್ರವಾಗಿ ಪರಿಶೀಲಿಸಲಾಗಿರುತ್ತದೆ.

ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ನೌಕರರ ಸೇವಾ ವಿಷಯಗಳಲ್ಲಿನ ನಿಬಂಧನೆಗಳು ತತ್ಪರಿಣಾಮದ ನೌಕರರ ವೇತನ ನಿಗದಿಯ ವಿಷಯಗಳು ಬಹಳ ಸಂಕೀರ್ಣವಾಗಿದ್ದು (Complex issue) ನಿಯಮಗಳ ಅರ್ಥೈಸುವಿಕೆ, ಅನುಷ್ಠಾನ ಮತ್ತು ರಚನೆಗಳಲ್ಲಿ ಕೈಗೊಳ್ಳುವ ನಿರ್ಧಾರ, ನಿಯಮಗಳ ರಚನೆಯಲ್ಲಿನ ಪದ ಜೋಡಣೆ ಇತ್ಯಾದಿ ಅಂಶಗಳನ್ನು ಜಾಗರೂಕತೆಯಿಂದ ಪರಿಶೀಲಿಸಿ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ಇರುತ್ತದೆ. ಏಕೆಂದರೆ, ಸೇವಾ ನಿಯಮಗಳ ರಚನೆಯಲ್ಲಿ ಅವಕಾಶಗಳನ್ನು ಕಲ್ಪಿಸುವ ಸಂದರ್ಭದಲ್ಲಿ ಪದಗಳ ಜೋಡಣೆ ಮತ್ತು ವಾಕ್ಯಗಳ ರಚನೆಯು ಸೇವಾ ನಿಯಮಗಳ ಮೂಲಭೂತ ಪರಿಕಲ್ಪನೆ ಮತ್ತು ಉದ್ದೇಶಕ್ಕೆ ಪೂರಕವಾಗಿರತಕ್ಕಂತೆ ಗಮನಿಸಬೇಕಾದ ಅನಿವಾರ್ಯತೆ ಇರುತ್ತದೆ. ಇಲ್ಲವಾದಲ್ಲಿ, ಪ್ರಸ್ತುತ ಬಡ್ತಿ ಶಿಕ್ಷಕರ ವೇತನದಲ್ಲಿನ ಅಸಮಾನತೆಯ ರೀತಿಯಲ್ಲಿ ಅನೇಕ ಸಂಕ್ಲಿಷ್ಟ ಸಂದರ್ಭಗಳು ಉಂಟಾಗಿ ಆಡಳಿತಾತ್ಮಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿದಾಗ ಕಂಡುಬರುವ ಅಂಶಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ:

1. ಪ್ರೌಢ ಶಾಲಾ ಶಿಕ್ಷಕರ ಮತ್ತು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗ

ಮೊದಲ ಬಾರಿಗೆ ನೇರ ನೇಮಕಾತಿ ಹೊಂದಿದ ಶಿಕ್ಷಕರುಗಳು ಅವರು ನೇಮಕಗೊಂಡ ಹುದ್ದೆಯಲ್ಲಿ 10 ವರ್ಷ, 15 ವರ್ಷ, 20 ವರ್ಷ, 25 ವರ್ಷ ಮತ್ತು 30 ವರ್ಷಗಳ ಪದೋನ್ನತಿರಹಿತ ಸೇವೆಗೆ ಅನುಕ್ರಮವಾಗಿ ಕಾಲಬದ್ಧ ಮುಂಬಡ್ತಿ, ಹಿರಿಯ ವೇತನ ಶ್ರೇಣಿಗೆ ಮುಂಬಡ್ತಿ ಮತ್ತು 1 ರಿಂದ 3 ಹೆಚ್ಚುವರಿ ವೇತನ ಬಡ್ತಿಗಳನ್ನು ಅನ್ವಯಿಸುವ ನಿಯಮ/ಆದೇಶಗಳ ಅವಕಾಶಗಳನ್ವಯ ಪಡೆಯಲು ಅರ್ಹರಿರುತ್ತಾರೆ.

2. ಚಾಲ್ತಿಯಲ್ಲಿರುವ ಕ.ನಾ.ಸೇ.(ಕಾಲಬದ್ಧ ಮುಂಬಡ್ತಿ) ನಿಯಮಗಳು, 1983, ಕ.ನಾ.ಸೇ. (ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ಮುಂಬಡ್ತಿ) ನಿಯಮಗಳು, 1991 ಗಳಲ್ಲಿನ ಅವಕಾಶಗಳನ್ವಯ 10 ವರ್ಷಗಳ ಸೇವೆಗೆ ಕಾಲಬದ್ಧ ಮುಂಬಡ್ತಿ, 15 ವರ್ಷಗಳ ಸೇವೆಗೆ ಹಿರಿಯ ವೇತನ ಶ್ರೇಣಿ ಮುಂಬಡ್ತಿ ಸೌಲಭ್ಯವನ್ನು ಸೇವೆಯಲ್ಲಿ ಒಂದು ಬಾರಿ ಮಾತ್ರ ಪಡೆಯಲು ಅವಕಾಶವಿರುತ್ತದೆ. ಈ ಸೌಲಭ್ಯಗಳ ಮಂಜೂರಾತಿಯ ಕಾರಣದಿಂದ ಉಂಟಾಗುವ ತಾರತಮ್ಯವನ್ನು ಸರಿಪಡಿಸಲೂ ಸಹ ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಆದರೆ, ವೇತನ ಎತ್ತರಿಕೆಯ ಸೌಲಭ್ಯವು ಸದರಿ ನಿಯಮಗಳ ನಿಬಂಧನೆಗಳಿಗೆ ಪೂರಕವಾಗಿರತಕ್ಕದ್ದು.

3. ಮುಂದುವರೆದು, ದಿನಾಂಕ: 09.05.2002ರ ಸರ್ಕಾರಿ ಆದೇಶ ಸಂ: ಆಇ 13 ಎಸ್‌ಆರ್‌ಪಿ 2002 ಮತ್ತು ದಿನಾಂಕ: 14.06.2012ರ ಸರ್ಕಾರಿ ಆದೇಶ ಸಂ: ಆಇ 12 ಎಸ್‌ಆರ್‌ಪಿ 2012 (VIII) ರನ್ವಯ ಸೇವೆಯಲ್ಲಿ ಕನಿಷ್ಠ ಒಂದೂ ಪದೋನ್ನತಿ ಹೊಂದಿಲ್ಲದೇ ಇರುವ ನೌಕರರಿಗೆ ಕ್ರಮವಾಗಿ 1ನೇ, 2ನೇ ಮತ್ತು 3ನೇ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಆದರೆ, ಈ ಸೌಲಭ್ಯವು ಸೇವೆಯಲ್ಲಿ ಕನಿಷ್ಠ ಒಂದು ಪದೋನ್ನತಿ ಪಡೆದ ನೌಕರರಿಗೆ (ಶಿಕ್ಷಕರನ್ನೂ ಒಳಗೊಂಡಂತೆ) ಅನ್ವಯಿಸುವುದಿಲ್ಲ.

ನೌಕರರ ವೇತನ ಮುಂಬಡ್ತಿ ಸೌಲಭ್ಯ ಮಂಜೂರಾತಿ ಕುರಿತಂತೆ ಚಾಲ್ತಿಯಲ್ಲಿರುವ ಈ ಮೇಲಿನ ನಿಯಮಗಳ ಪರಿಣಾಮವಾಗಿ, ಪ್ರೌಢ ಶಾಲೆಯ ಸಹ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪದೋನ್ನತಿ ಪಡೆದ ಕಾರಣಕ್ಕೆ ಪದೋನ್ನತಿ ಹೊಂದಿದ ಉಪನ್ಯಾಸಕರುಗಳು ಪದೋನ್ನತಿ ಹುದ್ದೆಯಲ್ಲಿ 20 ವರ್ಷ, 25 ವರ್ಷ ಮತ್ತು 30 ವರ್ಷಗಳ ಸೇವೆಗಾಗಿ ಹೆಚ್ಚುವರಿ ವೇತನ ಬಡ್ತಿ ಪಡೆಯಲು ಅರ್ಹರಿರುವುದಿಲ್ಲ. ಆದರೆ, ಪದೋನ್ನತಿ ಹೊಂದದೇ ಕೆಳಗಿನ ವೃಂದದ ಹುದ್ದೆಯಾದ ಪ್ರೌಢ ಶಾಲೆಯ ಸಹ ಶಿಕ್ಷಕರ ವೃಂದದ

ಹುದ್ದೆಯಲ್ಲಿ ಸೇವೆಯನ್ನು ಮುಂದುವರೆಸುವ ಶಿಕ್ಷಕರುಗಳು 20 ವರ್ಷಗಳ ಮೇಲ್ಪಟ್ಟ ಸೇವೆಗಾಗಿ ಹೆಚ್ಚುವರಿ ವೇತನ ಬಡ್ತಿಗಳನ್ನು ಪಡೆಯುತ್ತಾರೆ. ಈ ಕಾರಣದಿಂದ ಕೆಳಗಿನ ವೃಂದದ ಕಿರಿಯ ನೌಕರರು/ಶಿಕ್ಷಕರು ಪದೋನ್ನತಿ ಹೊಂದಿದ ಹಿರಿಯ ಶಿಕ್ಷಕರಿಗಿಂತ ಹೆಚ್ಚಿನ ಮೂಲ ವೇತನವನ್ನು ಪಡೆಯುವುದರಿಂದ ಇದು ಪದೋನ್ನತಿ ಹೊಂದಿದ ಪದವಿ ಪೂರ್ವ ಉಪನ್ಯಾಸಕ ಶಿಕ್ಷಕ ವೃಂದದ ನೌಕರರ ಅಸಮಾಧಾನಕ್ಕೆ ಪ್ರಮುಖ ಕಾರಣವಾಗಿರುತ್ತದೆ. ಇದಕ್ಕೆ ಕಾರಣ ವೇತನ ಮುಂಬಡ್ತಿ ನಿಯಮಗಳಲ್ಲಿನ ನಿಬಂಧನೆಗಳು ಮತ್ತು ಪ್ರಮುಖವಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಯಲ್ಲಿ ಸೇರ್ಪಡೆ ಮಾಡಲಾದ "ಪದೋನ್ನತಿ" ಪದದ ಪರಿಕಲ್ಪನೆ ಮತ್ತು ಅರ್ಥ ವ್ಯಾಪ್ತಿಯ ಸಂಕುಚಿತತೆಯು ಕಾರಣವಾಗಿರುತ್ತದೆ.

ಬಡ್ತಿ ಹೊಂದಿದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ ವೃಂದದ ನೌಕರರ ವೇತನ ಅಸಮಾನತೆಗೆ ಕಾರಣವಾಗಿರುವ ವೇತನ ಮುಂಬಡ್ತಿ ನಿಯಮಗಳು ಮತ್ತು ಹೆಚ್ಚುವರಿ ವೇತನ ಬಡ್ತಿ ನಿಯಮ/ಆದೇಶಗಳನ್ನು ಪುನರಾವಲೋಕಿಸಿ ಹೊಸ ನಿಯಮಗಳ ರಚನೆಯ ವಿಷಯವು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. ಈ ಬಗ್ಗೆ ಸೂಕ್ತ ಸಮಯದಲ್ಲಿ ಹೊಸ ಕರಡು ನಿಯಮಗಳನ್ನು ಪ್ರಕಟಿಸಲು ಕ್ರಮವಹಿಸಲಾಗುತ್ತಿದೆ.

ಪದೋನ್ನತಿ ಉಪನ್ಯಾಸಕರ ವೇತನ ಅಸಮಾನತೆಗೆ ಮೂಲ ಕಾರಣವನ್ನು ಅವಲೋಕಿಸಿದಾಗ ಕಂಡು ಬರುವ ಪ್ರಮುಖ ಅಂಶವೆಂದರೆ, ಪದೋನ್ನತಿ ಎಂಬ ಪರಿಕಲ್ಪನೆಯು, ಮೂಲತಃ ಒಂದೇ ಪದ ವೃಂದದ ಶ್ರೇಣೀಕೃತ ಹುದ್ದೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ (Basically the concept of promotion is restricted to vertical advancement in the linear hierarchical cadre post). ಆದರೆ, ಪದೋನ್ನತಿ ಎಂಬುದನ್ನು ಬೇರೆ ಘಟಕ/ಇಲಾಖೆಯ ಮೇಲಿನ ಪದ ವೃಂದದ ಹುದ್ದೆಗಳಿಗೂ ಅನ್ವಯಿಸಿ ಸ್ವಯಂಚಾಲಿತವಾಗಿ ನಿಯಮಗಳನ್ನು ರಚಿಸಿದಾಗ ಈ ರೀತಿಯ ತಿದ್ದುಪಡಿಗಳು ಸೇವಾ ನಿಯಮಗಳ ಮೂಲಭೂತ ಪರಿಕಲ್ಪನೆಗೆ ಮತ್ತು ಉದ್ದೇಶಕ್ಕೆ ವ್ಯತಿರಿಕ್ತವಾದ ಪರಿಣಾಮವನ್ನು ಉಂಟುಮಾಡುತ್ತವೆ. ಈ ಹಿನ್ನಲೆಯಲ್ಲಿ ಗಮನಿಸಿದಾಗ, ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ನೇರ ನೇಮಕಾತಿ ಮತ್ತು ಪದೋನ್ನತಿ ಎಂಬ ನೇಮಕಾತಿ ವಿಧಾನಗಳನ್ನು ಕಲ್ಪಿಸಲಾಗಿರುತ್ತದೆ. ಆದರೆ, ಪದೋನ್ನತಿ ಅವಕಾಶದಲ್ಲಿ ಬೇರೆ ಇಲಾಖೆಯ ಅಂದರೆ, ಬೇರೆ

ಜೇಷ್ಠತಾ ಘಟಕದ ಪ್ರೌಢ ಶಿಕ್ಷಣ ಇಲಾಖೆಯ ಶಿಕ್ಷಕರುಗಳಿಗೆ ಪದೋನ್ನತಿ ಎಂದು ನಮೂದಿಸಿರುವುದು ಮೂಲ ಸಮಸ್ಯೆಗೆ ಕಾರಣವಾಗಿರುತ್ತದೆ. ಏಕೆಂದರೆ, ಇದನ್ನು ಪದೋನ್ನತಿ ಎಂದು ಪರಿಗಣಿಸಿದಲ್ಲಿ, ಈ ಮೇಲೆ ತಿಳಿಸಿದ ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳು ಶಿಕ್ಷಕರುಗಳಿಗೆ ಲಭ್ಯವಾಗುವುದಿಲ್ಲ. ಬದಲಿಗೆ, ಇದನ್ನು "ಆಯ್ಕೆ ಮುಖಾಂತರ ಪದೋನ್ನತಿ (Promotion by Selection) ಎಂದು ತಿದ್ದುಪಡಿ ಮಾಡಬೇಕಾದ ಅತ್ಯಗತ್ಯತೆ ಇರುತ್ತದೆ. ಈ ರೀತಿ ಮಾಡಿದಲ್ಲಿ, ಅಂದರೆ, ಪ್ರೌಢ ಶಾಲಾ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಗೆ ಆಯ್ಕೆ ಮುಖಾಂತರ ಪದೋನ್ನತಿ ನೀಡಿದಲ್ಲಿ ಅದು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977ರ ನಿಯಮ 17ರನ್ವಯ ಬಡ್ತಿ ಮೂಲಕ ನೇರ ನೇಮಕಾತಿ ಎಂಬ ಪರಿಕಲ್ಪನೆಯ ವ್ಯಾಪ್ತಿಗೆ ಬರುತ್ತದೆ. ಈ ರೀತಿ ಮಾಡಿದಲ್ಲಿ ಶಿಕ್ಷಕರುಗಳು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯ ಪಡೆಯಲು ಯಾವುದೇ ಬಾಧಕ ಇರುವುದಿಲ್ಲ. ಈ ರೀತಿಯ ಆಯ್ಕೆ ಮುಖಾಂತರ ಪದೋನ್ನತಿ (ಬಡ್ತಿ ಮೂಲಕ ನೇಮಕ) ಪರಿಕಲ್ಪನೆಯು ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ರಾಜ್ಯ ಸೇವೆಯಿಂದ ಅಖಿಲ ಭಾರತ ಸೇವೆಗೆ ಪದೋನ್ನತಿ ನೀಡುವಲ್ಲಿ ಪರಿಚಾಲನೆಯಲ್ಲಿರುತ್ತದೆ.

ಈ ಮೇಲೆ ತಿಳಿಸಿರುವ ನಿಯಮಗಳ ಅರ್ಥೈಸುವಿಕೆಯಲ್ಲಿನ ಹಿನ್ನಲೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, 2013ರ ಕ್ರಮ ಸಂಖ್ಯೆ 10ರಲ್ಲಿನ ನಮೂದಿಗೆ ಸೂಕ್ತ ತಿದ್ದುಪಡಿ ಮಾಡಿ, "ಉಪನ್ಯಾಸಕರ" ಹುದ್ದೆಯ ಭರ್ತಿಯನ್ನು "ಆಯ್ಕೆ ಮೂಲಕ ಪದೋನ್ನತಿ ವಿಧಾನದಿಂದ ಭರ್ತಿ ಮಾಡತಕ್ಕದ್ದು" ಎಂಬ ಪದಗಳನ್ನು ಸೇರ್ಪಡೆ ಮಾಡಲು ಸದರಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಜರೂರು ಸೂಕ್ತ ಕ್ರಮವಹಿಸುವಂತೆ ಶಾಲಾ ಶಿಕ್ಷಣ ಇಲಾಖೆಯನ್ನು ಕೋರಿದೆ. ಈ ರೀತಿ ತಿದ್ದುಪಡಿ ಮಾಡಿದಲ್ಲಿ ಇದು ಪದೋನ್ನತಿ ಉಪನ್ಯಾಸಕರ ವೇತನದಲ್ಲಿನ ತಾರತಮ್ಯಕ್ಕೆ ಇರುವ ಪ್ರಮುಖ ಅಡತಡೆಯನ್ನು ನಿವಾರಿಸಿದಂತಾಗುತ್ತದೆ ಮತ್ತು ಶಿಕ್ಷಕರ ವೇತನ ಅಸಮಾನತೆಯ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗುತ್ತದೆ. ಈ ತಿದ್ದುಪಡಿಯನ್ನು ಮಾಡಿದ ಬಳಿಕ ಆರ್ಥಿಕ ಇಲಾಖೆಯು ವೇತನ ಮುಂಬಡ್ತಿ ನಿಯಮಗಳ ಕರಡು ನಿಯಮಗಳನ್ನು ಪ್ರಕಟಿಸಲು ಕ್ರಮವಹಿಸುತ್ತದೆ. ಏಕೆಂದರೆ, ಈ ನಿಯಮಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಸರ್ಕಾರದ ಈ ನಿರ್ಧಾರವು ಅಂದರೆ, ನಿಯಮಗಳ ತಿದ್ದುಪಡಿ ಮಾಡುವ ನಿರ್ಣಯವು 6ನೇ ಮತ್ತು 7ನೇ ರಾಜ್ಯ ವೇತನ ಆಯೋಗಗಳ ಶಿಫಾರಸ್ಸಿಗೆ ಅನುಗುಣವಾಗಿರುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವಲ್ಲಿ ಪದೋನ್ನತಿ ಎಂಬ ಪದಕ್ಕ

ಪರ್ಯಾಯವಾಗಿ ಆಯ್ಕೆ ಮೂಲಕ ಪದೋನ್ನತಿ ಎಂಬ ಪದಗಳನ್ನು ಪ್ರತಿಸ್ಥಾಪಿಸಲು ಕ್ರಮವಹಿಸುವುದು. ಮುಂದುವರೆದು, ಆರ್ಥಿಕ ಇಲಾಖೆಯ ಸಲಹೆಯನ್ವಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವಲ್ಲಿ ಸರ್ಕಾರದ ದಿನಾಂಕ: 13.04.2022ರ ಸುತ್ತೋಲೆ ಸಂ: ಸಸಂಶಾ(ಎಂ):62/2022ರ ಕ್ರಮ ಸಂಖ್ಯೆ 6ರ ಅವಕಾಶಗಳ ಕಡೆ ಶಾಲಾ ಶಿಕ್ಷಣ ಇಲಾಖೆಯ ಆದ್ಯ ಗಮನ ಸೆಳೆಯಬಯಸುತ್ತದೆ. ಇದನ್ನು ಅನುಸರಿಸುವುದರಿಂದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ತಗೆದುಕೊಳ್ಳುವ ಕಾಲವಿಳಂಬವು ಉಂಟಾಗುವುದಿಲ್ಲ. ಆದುದರಿಂದ, ಈ ಮೇಲೆ ಪ್ರಸ್ತಾಪಿಸಿದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಜರೂರು ತಿದ್ದುಪಡಿ ಮಾಡಲು ಅಗತ್ಯ ಕ್ರಮವಹಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯನ್ನು ಮತ್ತೊಮ್ಮೆ ಕೋರಿದೆ.

ಪದೋನ್ನತಿ ಉಪನ್ಯಾಸಕರ ವೇತನ ಅಸಮಾನತೆಯ ಪ್ರಸ್ತಾವನೆಯನ್ನು ಪರಿಶೀಲಿಸುವಲ್ಲಿ, ಪದೋನ್ನತಿ ಶಿಕ್ಷಕರ ವೇತನ ಅಸಮಾನತೆಗೆ ಈ ಮೇಲೆ ತಿಳಿಸಿರುವಂತೆ ನಿಯಮಗಳ ಅವಕಾಶಗಳು ಒಂದು ರೀತಿಯಲ್ಲಿ ಕಾರಣವಾದರೆ, ಇದಕ್ಕೆ ಸೇರ್ಪಡೆಗೊಂಡಂತೆ ಶಿಕ್ಷಕರ ವೇತನ ನಿಗದಿಯಲ್ಲಿನ ನಿಯಮಗಳಿಗೆ ವ್ಯತಿರಿಕ್ತವಾದ ಅಸಮರ್ಪಕ ನಿರ್ಧಾರಗಳೂ ಸಹ ಕಾರಣವಾಗಿರುತ್ತವೆ. ಶಿಕ್ಷಕರುಗಳ ವೇತನ ನಿಗದಿಯಲ್ಲಿ/ವೇತನ ಎತ್ತರಿಕೆ ನೀಡಿ ವೇತನ ನಿಗದಿಪಡಿಸುವಲ್ಲಿ ಕೈಗೊಳ್ಳುವ ಅಸಮರ್ಪಕ ನಿರ್ಧಾರಗಳೂ ಕೂಡ ಶಿಕ್ಷಕರ ವೇತನ ಅಸಮಾನತೆಗೆ ಕಾರಣವಾಗಿ ಪದೋನ್ನತಿ ಶಿಕ್ಷಕರ ವೇತನದ ಮೊತ್ತದಲ್ಲಿ ಗಣನೀಯ ಇಳಿಕೆಯಾಗಲು ಕಾರಣವಾಗಿರುತ್ತದೆ. ಆದುದರಿಂದ, ಮೊದಲಿಗೆ ಈ ರೀತಿಯ ಅಸಮರ್ಪಕ ವೇತನ ನಿಗದಿಗಳನ್ನು ಈ ಕೆಳಕಂಡ ಪ್ರಕರಣಗಳಲ್ಲಿನ ದೃಷ್ಟಾಂತಗಳ ಬೆಳಕಿನಲ್ಲಿ ಪರಿಶೀಲಿಸಿ ಇಂತಹುದೇ ಸಮಾನಾಂತರ ಪ್ರಕರಣಗಳಲ್ಲಿನ ಪದೋನ್ನತಿ ಉಪನ್ಯಾಸಕರುಗಳ ವೇತನವನ್ನು ಪುನರ್ ನಿಗದಿಪಡಿಸಿದಲ್ಲಿ ಶಿಕ್ಷಕರುಗಳ ವೇತನ ಅಸಮಾನತೆಯ ಪ್ರಮಾಣವು ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ಇದು ಶಿಕ್ಷಕರ ಅಸಮಾಧಾನವನ್ನೂ ಸಹ ಕಡಿಮೆ ಮಾಡುತ್ತದೆ ಎಂದು ಆರ್ಥಿಕ ಇಲಾಖೆಯು ಭಾವಿಸುತ್ತದೆ.

<u>ಪ್ರಕರಣ-1:</u>

ಪ್ರಸ್ತಾವನೆಯಲ್ಲಿ ತಿಳಿಸಿರುವ ಹಿರಿಯ ಮತ್ತು ಕಿರಿಯ ಉಪನ್ಯಾಸಕ/ಶಿಕ್ಷಕರುಗಳ ವೇತನ ವಿವರಗಳನ್ನು ಪರಿಶೀಲಿಸಿದಾಗ ಮೊದಲಿಗೆ ಹಿರಿಯ ನೌಕರರಾದ ಶ್ರೀ ಹನುಮಂತಯ್ಯ, ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಇವರ ಪ್ರಕರಣದಲ್ಲಿ ಅವರ ವೇತನ ಅಸಮಾನತೆಯು ಮೊದಲಿಗೆ ಅವರು ನೇಮಕಗೊಂಡ ಪ್ರೌಢ ಶಾಲಾ ಸಹ ಶಿಕ್ಷಕರ

ಹುದ್ದೆಯಲ್ಲಿಯೇ ಕಂಡುಬರುತ್ತದೆ. ಇದು ಇವರ ಕಿರಿಯ ನೌಕರರ ಪದೋನ್ನತಿ ಸೌಲಭ್ಯ ಮಂಜೂರಾತಿಯ ನಂತರ ಮತ್ತಷ್ಟು ಹೆಚ್ಚಳವಾಗಿರುತ್ತದೆ. ಆದುದರಿಂದ, ಹಿರಿಯ ನೌಕರರಾದ ಶ್ರೀ ಹನುಮಂತಯ್ಯ, ಪ್ರಸ್ತುತ ಪದವಿ ಪೂರ್ವ ಕಾಲೇಜು ಉಪನ್ಯಾಸಕರು ಇವರ ಪ್ರೌಢ ಶಾಲಾ ಸಹ ಶಿಕ್ಷಕ ವೃಂದದ ಹುದ್ದೆಯ ವೇತನವನ್ನು ಸೇವಾ ಜೇಷ್ಠತೆಯಲ್ಲಿ ಇವರಿಗಿಂತ ಕಿರಿಯರಾದ ಶ್ರೀ ಡಿ.ಎಸ್.ಪುಟ್ಟರಾಜು, ಸಹ ಶಿಕ್ಷಕರು ಇವರ ವೇತನದ ಸಮಕ್ಕೆ ಕ.ನಾ.ಸೇ. (ಪರಿಷ್ಕೃತ ವೇತನ) ನಿಯಮಗಳು, 1999ರ ನಿಯಮ 7ರ ಅವಕಾಶಗಳನ್ವಯ ಮೊದಲಿಗೆ ದಿನಾಂಕ: 01.05.1999 ರಿಂದ ಜಾರಿಗೆ ಬರುವಂತೆ ಎತ್ತರಿಸಿ ಪುನರ್ ನಿಗದಿಪಡಿಸಿ ಅನಂತರ ಅವರ ನಂತರದ ವೇತನ ನಿಗದಿಯನ್ನು ನಿಯಮಾನುಸಾರ ಕ್ರಮಬದ್ಧಗೊಳಿಸುವುದು.

<u>ಪ್ರಕರಣ-2</u>:

ಪ್ರಸ್ತಾವನೆಯಲ್ಲಿ ತಿಳಿಸಿರುವ ಮತ್ತೋರ್ವ ಹಿರಿಯ ನೌಕರರಾದ ಶ್ರೀ ಹೆಚ್.ಆರ್. ರವಿಕುಮಾರ್‌ರವರು ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಗೆ ಮೊದಲಿಗೆ ದಿನಾಂಕ: 14.09.1994ರಂದು ನೇಮಕಗೊಂಡಿದ್ದು, ಅವರಿಗಿಂತ ಸೇವಾ ಜೇಷ್ಠತೆಯಲ್ಲಿ ಕಿರಿಯವರಾದ ಶ್ರೀ ಡಿ.ಚಂದ್ರಶೇಖರ್ ಇವರು ದಿನಾಂಕ: 09.05.1996ರಂದು ಸದರಿ ಹುದ್ದೆಗೆ ನೇಮಕಗೊಂಡಿರುತ್ತಾರೆ. ಹಿರಿಯ ನೌಕರರು 2007ರ ಪರಿಷ್ಕೃತ ವೇತನ ಶ್ರೇಣಿಯ ಜಾರಿಗೂ ಪೂರ್ವದಲ್ಲಿಯೇ, ದಿನಾಂಕ: 14.09.2004ರಂದು 10 ವರ್ಷಗಳ ಸೇವೆಗಾಗಿ ಕಾಲಬದ್ಧ ಮುಂಬಡ್ತಿ ಸೌಲಭ್ಯವನ್ನು ಪಡೆದಿರುತ್ತಾರೆ ಮತ್ತು ನಂತರದಲ್ಲಿ ದಿನಾಂಕ: 28.08.2007ರಂದು ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ಪಡೆದಿರುತ್ತಾರೆ. ಅದೇ ಸೇವಾ ಜೇಷ್ಠತೆಯಲ್ಲಿ ಕಿರಿಯರಾದ ನೌಕರರು 2007ರ ಪರಿಷ್ಕೃತ ವೇತನ ಶ್ರೇಣಿಯ ಜಾರಿಯ ನಂತರದಲ್ಲಿ ದಿನಾಂಕ: 09.05.2006ಕ್ಕೆ 10 ವರ್ಷಗಳ ಸೇವೆಗಾಗಿ ಕಾಲಬದ್ಧ ಮುಂಬಡ್ತಿಯನ್ನು ಪಡೆದು ಈ ದಿನಾಂಕದ ನಂತರ ಹಿರಿಯ ನೌಕರರಿಗಿಂತ ಹೆಚ್ಚಿನ ಮೂಲ ವೇತನ ಪಡೆಯಲು ಪ್ರಾರಂಭಿಸಿರುತ್ತಾರೆ. ಆದುದರಿಂದ, ಹಿರಿಯ ನೌಕರರಾದ ಶ್ರೀ ಹೆಚ್.ಆರ್. ರವಿಕುಮಾರ್ ಇವರ ವೇತನವನ್ನು ದಿನಾಂಕ: 09.05.2006ರಿಂದ ಅನ್ವಯವಾಗುವಂತೆ, ಸೇವಾ ಜೇಷ್ಠತೆಯಲ್ಲಿ ಅವರಿಗಿಂತ ಕಿರಿಯವರಾದ ಶ್ರೀ ಡಿ.ಚಂದ್ರಶೇಖರ್ ಇವರ ವೇತನದ ಸಮಕ್ಕೆ ಕ.ನಾ.ಸೇ. (ಪರಿಷ್ಕೃತ ವೇತನ) ನಿಯಮಗಳು, 2007ರ ನಿಯಮ 7(8)ರ ಅವಕಾಶಗಳನ್ವಯ ಪರಿಶೀಲಿಸಿ ಎತ್ತರಿಸತಕ್ಕದ್ದು. ಆನಂತರ, ಹಿರಿಯರ ವೇತನ ನಿಗದಿಯನ್ನು ನಿಯಮಾನುಸಾರ ಕ್ರಮಬದ್ಧಗೊಳಿಸುವುದು. ಪ್ರಸ್ತಾವನೆಯಲ್ಲಿ ತಿಳಿಸಿರುವ ಇತರ ಹಿರಿಯ ನೌಕರರಾದ ಶ್ರೀಮತಿ

ಉಮಾದೇವಿ ಮತ್ತು ಶ್ರೀ ಚಂದ್ರಮೌಳಿ.ಬಿ.ಪಿ. ಇವರ ಪ್ರಕರಣದಲ್ಲಿಯೂ ಸಹ ಈ ಮೇಲಿನಂತೆಯೇ ಕ್ರಮವಹಿಸುವುದು.

ಪ್ರಕರಣ-3:

ಪ್ರಸ್ತಾವನೆಯಲ್ಲಿ ತಿಳಿಸಿರುವ ಮತ್ತೊಬ್ಬ ಹಿರಿಯ ನೌಕರರಾದ ಶ್ರೀ ತಿಪ್ಪೇಸ್ವಾಮಿ ಇವರ ವೇತನವೂ ಸಹ ಸೇವಾ ಜೇಷ್ಠತೆಯಲ್ಲಿ ಅವರಿಗಿಂತ ಕಿರಿಯವರಾದ ಶ್ರೀ ಡಿ.ಚಂದ್ರಶೇಖರ್ ಇವರ ವೇತನಕ್ಕಿಂತ ಕಡಿಮೆ ನಿಗದಿಯಾಗಿರುವುದಿರಿಂದ ಅವರ ವೇತನವನ್ನೂ ಸಹ ಈ ಮೇಲಿನ ಪ್ರಕರಣ- 2 ರಲ್ಲಿ ತಿಳಿಸಿರುವಂತೆ ಪರಿಗಣಿಸಿ ಎತ್ತರಿಸಲು ನಿಯಮಾನುಸಾರ ಕ್ರಮವಹಿಸುವುದು.

ಪದೋನ್ನತಿ ಹೊಂದಿದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೇತನದಲ್ಲಿನ ತಾರತಮ್ಯಕ್ಕೆ ಮೂಲ ಕಾರಣಗಳನ್ನು ತಜ್ಞ ಸಮಿತಿಗಳಾದ 6ನೇ ರಾಜ್ಯ ವೇತನ ಆಯೋಗ ಮತ್ತು 7ನೇ ರಾಜ್ಯ ವೇತನ ಆಯೋಗಗಳು ಪರಿಶೀಲಿಸಿ ಇದನ್ನು ನಿವಾರಿಸಲು ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲು ಅಥವಾ ನಿಯಮಗಳನ್ನು ರಚಿಸಲು ಶಿಫಾರಸ್ಸು ಮಾಡಿರುತ್ತದೆ. ಬಡ್ತಿ ಶಿಕ್ಷಕರ ವೇತನ ಅಸಮಾನತೆಯು ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದು, ಶಿಕ್ಷಕರ ಅಸಮಾಧಾನಕ್ಕೆ ಕಾರಣವಾಗಿರುತ್ತದೆ. ಆದುದರಿಂದ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಪದೋನ್ನತಿ ಉಪನ್ಯಾಸಕರ (ಶಿಕ್ಷಕರ) ವೇತನ ಅಸಮಾನತೆಗೆ ಮೂಲ ಕಾರಣವಾಗಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಅವಕಾಶವನ್ನು ಈ ಮೇಲೆ ತಿಳಿಸಿರುವಂತೆ ತಿದ್ದುಪಡಿ ಮಾಡಲು ಜರೂರು ಕ್ರಮವಹಿಸುವಂತೆ ಶಿಕ್ಷಣ ಇಲಾಖೆಯನ್ನು ಪುನಃ ಕೋರಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೂ ಮೊದಲು ಶಿಕ್ಷಕರ ವೇತನ ನಿಗದಿಯಲ್ಲಿನ ತಪ್ಪುಗಳನ್ನು ಈ ಮೇಲಿನ ಪ್ರಕರಣಗಳಲ್ಲಿನ ದೃಷ್ಟಾಂತಗಳಡಿ ಪರಿಶೀಲಿಸಿ ಇದೇ ರೀತಿಯ ಇತರ ಶಿಕ್ಷಕರ ವೇತನ ನಿಗದಿಯಲ್ಲಿನ ತಪ್ಪುಗಳನ್ನು ಸರಿಪಡಿಸಲು ಮೊದಲಿಗೆ ಕ್ರಮವಹಿಸತಕ್ಕದ್ದು.

ಈ ಮೇಲೆ ತಿಳಿಸಿದಂತೆ, ವೇತನ ಮುಂಬಡ್ತಿ ಮತ್ತು ಹೆಚ್ಚುವರಿ ವೇತನ ಬಡ್ತಿ ನಿಯಮ/ ಆದೇಶಗಳನ್ನು ಪುನರ್ ಪರಿಶೀಲಿಸಿ ಪರಿಷ್ಕೃತ ನಿಯಮಗಳ ರಚನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುವುದರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಈ ಮೇಲೆ ತಿಳಿಸಿದಂತ ತಿದ್ದುಪಡಿ ಮಾಡಲು ಮಾನ್ಯ ಶಾಲಾ ಶಿಕ್ಷಣ ಸಚಿವರ

ಅನುಮೋದನೆ ಪಡೆದು ಕ್ರಮವಹಿಸುವಂತೆ ಕೋರಿದೆ. ಕೈಗೊಂಡ ಕ್ರಮದ ಬಗ್ಗೆ ಆರ್ಥಿಕ ಇಲಾಖೆಗೆ ಮಾಹಿತಿ ಒದಗಿಸುವಂತೆಯೂ ಸಹ ಕೋರಿದೆ.
(ಮಾನ್ಯ ಮುಖ್ಯಮಂತ್ರಿಯವರಿಂದ ಅನುಮೋದಿತ)

Digitally signed by
Uma K
Date: 11-07-2025
13:32:47
(ಉಮಾ.ಕೆ.)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-2).

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

## ವಿಶೇಷ ಸದನ ಸಮಿತಿಗೆ ವರದಿ ಸಲ್ಲಿಸುವ ಕುರಿತು.

ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ, ಪ್ರೌಢ ಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದಿದ ಶಿಕ್ಷಕರುಗಳು ಹಾಗೂ 10, 15, 20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ ಸೌಲಭ್ಯಗಳನ್ನು ಪಡೆದಿರುವ ಶಿಕ್ಷಕರುಗಳ ನಡುವಿನ ವೇತನ ತಾರತಮ್ಯವನ್ನು ಸರಿಪಡಿಸುವ ಸಂಬಂಧ ಮಾರ್ಗೋಪಾಯಗಳನ್ನು ರೂಪಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ದಿನಾಂಕ:10.08.2026ರ ಮಧ್ಯಾಹ್ನ 12.15 ಗಂಟೆಗೆ ಶಾಸಕರ ಭವನ ಕಟ್ಟಡ-05ರ 3ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ನಡೆಯುವ ಸಭೆಗೆ ಈ ಕೆಳಕಂಡ ಮಾಹಿತಿಯನ್ನು ನೀಡಲಾಗಿದೆ.

ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-2 ಹುದ್ದೆಗಳಿಂದ ಪದವಿ ಪೂರ್ವ ಕಾಲೇಜು ಉಪನ್ಯಾಸಕ ಹುದ್ದೆಗಳಿಗೆ ವಿದ್ಯಾರ್ಹತೆ ಮತ್ತು ಜೇಷ್ಠತೆಯ ಆಧಾರದ ಮೇಲೆ ಮುಂಬಡ್ತಿ ಪಡೆದ ಶಿಕ್ಷಕರ ವೇತನ ತಾರಾತಮ್ಯಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿತ್ತು. ಆ ಮೇರೆಗೆ ಆರ್ಥಿಕ ಇಲಾಖೆಯು ಕೆಳಕಂಡಂತೆ ಅಭಿಪ್ರಾಯ ನೀಡಲಾಗಿರುತ್ತದೆ.

"ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಸ್ತಾವನೆಯು, ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಗೆ ಮುಂಬಡ್ತಿ ಹೊಂದಿದ ಶಿಕ್ಷಕರ ವೇತನದಲ್ಲಿನ ತಾರತಮ್ಯವನ್ನು ಸರಿಪಡಿಸಲು ಆರ್ಥಿಕ ಇಲಾಖೆಯ ಮಾರ್ಗದರ್ಶನ ಕೋರಿರುವ ಕುರಿತಾಗಿರುತ್ತದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ, ಆಡಳಿತ ಇಲಾಖೆಯ ಕಡತ ಮತ್ತು ಲಗತ್ತಿಸಿರುವ ದಾಖಲೆಗಳು, ಚಾಲ್ತಿಯಲ್ಲಿರುವ ಸೇವಾ ನಿಯಮಗಳು ಮತ್ತು ಪದೋನ್ನತಿ ಹೊಂದಿದ ಶಿಕ್ಷಕರುಗಳ ವೇತನ ಅಸಮಾನತೆಯ ಕುರಿತಂತೆ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸು ಮತ್ತು ಶಿಫಾರಸ್ಸಿನ ಮೇಲೆ ರಾಜ್ಯ ಸರ್ಕಾರವು ಕೈಗೊಂಡ ನಿರ್ಣಯ ಹಾಗೂ ಈ ಕುರಿತಂತೆ 7ನೇ ರಾಜ್ಯ ವೇತನ ಆಯೋಗವು ರಾಜ್ಯ ಸರ್ಕಾರಕ್ಕೆ ಮಾಡಿರುವ ಶಿಫಾರಸ್ಸುಗಳ ಮಾಹಿತಿಗಳ ಬೆಳಕಿನಲ್ಲಿ ಪ್ರಕರಣವನ್ನು ಆಮೂಲಾಗ್ರವಾಗಿ ಪರಿಶೀಲಿಸಲಾಗಿರುತ್ತದೆ.

ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ನೌಕರರ ಸೇವಾ ವಿಷಯಗಳಲ್ಲಿನ ನಿಬಂಧನೆಗಳು ತತ್ಪರಿಣಾಮದ ನೌಕರರ ವೇತನ ನಿಗದಿಯ ವಿಷಯಗಳು ಬಹಳ ಸಂಕೀರ್ಣವಾಗಿದ್ದು (Complex issue) ನಿಯಮಗಳ ಅರ್ಥೈಸುವಿಕೆ, ಅನುಷ್ಠಾನ ಮತ್ತು ರಚನೆಗಳಲ್ಲಿ ಕೈಗೊಳ್ಳುವ ನಿರ್ಧಾರ, ನಿಯಮಗಳ ರಚನೆಯಲ್ಲಿನ ಪದ ಜೋಡಣೆ ಇತ್ಯಾದಿ. ಅಂಶಗಳನ್ನು

(50) (51)

ಜಾಗರೂಕತೆಯಿಂದ ಪರಿಶೀಲಿಸಿ ನಿರ್ಧಾರ ಕೈಗೊಳ್ಳಬೇಕಾದ ಅನಿವಾರ್ಯತೆ ಇರುತ್ತದೆ. ಏಕೆಂದರೆ, ಸೇವಾ ನಿಯಮಗಳ ರಚನೆಯಲ್ಲಿ ಅವಕಾಶಗಳನ್ನು ಕಲ್ಪಿಸುವ ಸಂದರ್ಭದಲ್ಲಿ ಪದಗಳ ಜೋಡಣೆ ಮತ್ತು ವಾಕ್ಯಗಳ ರಚನೆಯು ಸೇವಾ ನಿಯಮಗಳ ಮೂಲಭೂತ ಪರಿಕಲ್ಪನೆ ಮತ್ತು ಉದ್ದೇಶಕ್ಕೆ ಪೂರಕವಾಗಿರತಕ್ಕಂತೆ ಗಮನಿಸಬೇಕಾದ ಅನಿವಾರ್ಯತೆ ಇರುತ್ತದೆ. ಇಲ್ಲವಾದಲ್ಲಿ, ಪ್ರಸ್ತುತ ಬಡ್ತಿ ಶಿಕ್ಷಕರ ವೇತನದಲ್ಲಿನ ಅಸಮಾನತೆಯ ರೀತಿಯಲ್ಲಿ ಅನೇಕ ಸಂಕೀರ್ಣ ಸಂದರ್ಭಗಳು ಉಂಟಾಗಿ ಆಡಳಿತಾತ್ಮಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿದಾಗ ಕಂಡುಬರುವ ಅಂಶಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ:

1. ಪ್ರೌಢ ಶಾಲಾ ಶಿಕ್ಷಕರ ಮತ್ತು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಮೊದಲ ಬಾರಿಗೆ ನೇರ ನೇಮಕಾತಿ ಹೊಂದಿದ ಶಿಕ್ಷಕರುಗಳು ಅವರು ನೇಮಕಗೊಂಡ ಹುದ್ದೆಯಲ್ಲಿ 10 ವರ್ಷ, 15 ವರ್ಷ, 20 ವರ್ಷ, 25 ವರ್ಷ ಮತ್ತು 30 ವರ್ಷಗಳ ಪದೋನ್ನತಿರಹಿತ ಸೇವೆಗೆ ಅನುಕ್ರಮವಾಗಿ ಕಾಲಬದ್ಧ ಮುಂಬಡ್ತಿ, ಹಿರಿಯ ವೇತನ ಶ್ರೇಣಿಗೆ ಮುಂಬಡ್ತಿ ಮತ್ತು 1 ರಿಂದ 3 ಹೆಚ್ಚುವರಿ ವೇತನ ಬಡ್ತಿಗಳನ್ನು ಅನ್ವಯಿಸುವ ನಿಯಮ/ಆದೇಶಗಳ ಅವಕಾಶಗಳನ್ವಯ ಪಡೆಯಲು ಅರ್ಹರಿರುತ್ತಾರೆ.

2. ಚಾಲ್ತಿಯಲ್ಲಿರುವ ಕ.ನಾ.ಸೇ.(ಕಾಲಬದ್ಧ ಮುಂಬಡ್ತಿ) ನಿಯಮಗಳು, 1983, ಕ.ನಾ.ಸೇ. (ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ಮುಂಬಡ್ತಿ) ನಿಯಮಗಳು, 1991 ಗಳಲ್ಲಿನ ಅವಕಾಶಗಳನ್ವಯ 10 ವರ್ಷಗಳ ಸೇವೆಗೆ ಕಾಲಬದ್ಧ ಮುಂಬಡ್ತಿ, 15 ವರ್ಷಗಳ ಸೇವೆಗೆ ಹಿರಿಯ ವೇತನ ಶ್ರೇಣಿ ಮುಂಬಡ್ತಿ ಸೌಲಭ್ಯವನ್ನು ಸೇವೆಯಲ್ಲಿ ಒಂದು ಬಾರಿ ಮಾತ್ರ ಪಡೆಯಲು ಅವಕಾಶವಿರುತ್ತದೆ. ಈ ಸೌಲಭ್ಯಗಳ ಮಂಜೂರಾತಿಯ ಕಾರಣದಿಂದ ಉಂಟಾಗುವ ತಾರತಮ್ಯವನ್ನು ಸರಿಪಡಿಸಲೂ ಸಹ ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಆದರೆ, ವೇತನ ಏತ್ರರಿಕೆಯ ಸೌಲಭ್ಯವು ಸದರಿ ನಿಯಮಗಳ ನಿಬಂಧನೆಗಳಿಗೆ ಪೂರಕವಾಗಿರತಕ್ಕದ್ದು.

3. ಮುಂದುವರೆದು, ದಿನಾಂಕ: 09.05.2002ರ ಸರ್ಕಾರಿ ಆದೇಶ ಸಂ: ಆಇ 13 ಎಸ್ಆರ್‌ಪಿ 2002 ಮತ್ತು ದಿನಾಂಕ: 14.06.2012ರ ಸರ್ಕಾರಿ ಆದೇಶ ಸಂ: ಆಇ 12 ಎಸ್ಆರ್‌ಪಿ 2012 (VIII) ರನ್ವಯ ಸೇವೆಯಲ್ಲಿ ಕನಿಷ್ಠ ಒಂದೂ ಪದೋನ್ನತಿ ಹೊಂದಿಲ್ಲದೇ ಇರುವ ನೌಕರರಿಗೆ ಕ್ರಮವಾಗಿ 1ನೇ, 2ನೇ ಮತ್ತು 3ನೇ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ.

-46

ಆದರೆ, ಈ ಸೌಲಭ್ಯವು ಸೇವೆಯಲ್ಲಿ ಕನಿಷ್ಠ ಒಂದು ಪದೋನ್ನತಿ ಪಡೆದ ನೌಕರರಿಗೆ (ಶಿಕ್ಷಕರನ್ನೂ ಒಳಗೊಂಡಂತೆ) ಅನ್ವಯಿಸುವುದಿಲ್ಲ.

ನೌಕರರ ವೇತನ ಮುಂಬಡ್ತಿ ಸೌಲಭ್ಯ ಮಂಜೂರಾತಿ ಕುರಿತಂತೆ ಚಾಲ್ತಿಯಲ್ಲಿರುವ ಈ ಮೇಲಿನ ನಿಯಮಗಳ ಪರಿಣಾಮವಾಗಿ, ಪ್ರೌಢ ಶಾಲೆಯ ಸಹ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪದೋನ್ನತಿ ಪಡೆದ ಕಾರಣಕ್ಕೆ ಪದೋನ್ನತಿ ಹೊಂದಿದ ಉಪನ್ಯಾಸಕರುಗಳು ಪದೋನ್ನತಿ ಹುದ್ದೆಯಲ್ಲಿ 20 ವರ್ಷ, 25 ವರ್ಷ ಮತ್ತು 30 ವರ್ಷಗಳ ಸೇವೆಗಾಗಿ ಹೆಚ್ಚುವರಿ ವೇತನ ಬಡ್ತಿ ಪಡೆಯಲು ಅರ್ಹರಿರುವುದಿಲ್ಲ. ಆದರೆ, ಪದೋನ್ನತಿ ಹೊಂದದೆ ಕೆಳಗಿನ ವೃಂದದ ಹುದ್ದೆಯಾದ ಪ್ರೌಢ ಶಾಲೆಯ ಸಹ ಶಿಕ್ಷಕರ ವೃಂದದ ಹುದ್ದೆಯಲ್ಲಿ ಸೇವೆಯನ್ನು ಮುಂದುವರೆಸುವ ಶಿಕ್ಷಕರುಗಳು 20 ವರ್ಷಗಳ ಮೇಲ್ಪಟ್ಟ ಸೇವೆಗಾಗಿ ಹೆಚ್ಚುವರಿ ವೇತನ ಬಡ್ತಿಗಳನ್ನು ಪಡೆಯುತ್ತಾರೆ. ಈ ಕಾರಣದಿಂದ ಕೆಳಗಿನ ವೃಂದದ ಕಿರಿಯ ನೌಕರರು/ಶಿಕ್ಷಕರು ಪದೋನ್ನತಿ ಹೊಂದಿದ ಹಿರಿಯ ಶಿಕ್ಷಕರಿಗಿಂತ ಹೆಚ್ಚಿನ ಮೂಲ ವೇತನವನ್ನು ಪಡೆಯುವುದರಿಂದ ಇದು ಪದೋನ್ನತಿ ಹೊಂದಿದ ಪದವಿ ಪೂರ್ವ ಉಪನ್ಯಾಸಕ ಶಿಕ್ಷಕ ವೃಂದದ ನೌಕರರ ಅಸಮಾಧಾನಕ್ಕೆ ಪ್ರಮುಖ ಕಾರಣವಾಗಿರುತ್ತದೆ. ಇದಕ್ಕೆ ಕಾರಣ ವೇತನ ಮುಂಬಡ್ತಿ ನಿಯಮಗಳಲ್ಲಿನ ನಿಬಂಧನೆಗಳು ಮತ್ತು ಪ್ರಮುಖವಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಯಲ್ಲಿ ಸೇರ್ಪಡೆ ಮಾಡಲಾದ "ಪದೋನ್ನತಿ" ಪದದ ಪರಿಕಲ್ಪನೆ ಮತ್ತು ಅರ್ಥ ವ್ಯಾಪ್ತಿಯ ಸಂಕುಚಿತತೆಯು ಕಾರಣವಾಗಿರುತ್ತದೆ.

ಬಡ್ತಿ ಹೊಂದಿದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ ವೃಂದದ ನೌಕರರ ವೇತನ ಅಸಮಾನತೆಗೆ ಕಾರಣವಾಗಿರುವ ವೇತನ ಮುಂಬಡ್ತಿ ನಿಯಮಗಳು ಮತ್ತು ಹೆಚ್ಚುವರಿ ವೇತನ ಬಡ್ತಿ ನಿಯಮ/ಆದೇಶಗಳನ್ನು ಪುನರಾವಲೋಕಿಸಿ ಹೊಸ ನಿಯಮಗಳ ರಚನೆಯ ವಿಷಯವು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. ಈ ಬಗ್ಗೆ ಸೂಕ್ತ ಸಮಯದಲ್ಲಿ ಹೊಸ ಕರಡು ನಿಯಮಗಳನ್ನು ಪ್ರಕಟಿಸಲು ಕ್ರಮವಹಿಸಲಾಗುತ್ತಿದೆ.

ಪದೋನ್ನತಿ ಉಪನ್ಯಾಸಕರ ವೇತನ ಅಸಮಾನತೆಗೆ ಮೂಲ ಕಾರಣವನ್ನು ಅವಲೋಕಿಸಿದಾಗ ಕಂಡು ಬರುವ ಪ್ರಮುಖ ಅಂಶವೆಂದರೆ, ಪದೋನ್ನತಿ ಎಂಬ ಪರಿಕಲ್ಪನೆಯು, ಮೂಲತ: ಒಂದೇ ಪದ ವೃಂದದ ಶ್ರೇಣೀಕೃತ ಹುದ್ದೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ (Basically the concept of promotion is restricted to

- 146 47 -

vertical advancement in the linear hierarchical cadre post). ಆದರೆ, ಪದೋನ್ನತಿ ಎಂಬುದನ್ನು ಬೇರೆ ಘಟಕ/ಇಲಾಖೆಯ ಮೇಲಿನ ಪದ ವೃಂದದ ಹುದ್ದೆಗಳಿಗೂ ಅನ್ವಯಿಸಿ ಸ್ವಯಂಚಾಲಿತವಾಗಿ ನಿಯಮಗಳನ್ನು ರಚಿಸಿದಾಗ ಈ ರೀತಿಯ ತಿದ್ದುಪಡಿಗಳು ಸೇವಾ ನಿಯಮಗಳ ಮೂಲಭೂತ ಪರಿಕಲ್ಪನೆಗೆ ಮತ್ತು ಉದ್ದೇಶಕ್ಕೆ ವ್ಯತಿರಿಕ್ತವಾದ ಪರಿಣಾಮವನ್ನು ಉಂಟುಮಾಡುತ್ತವೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ, ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ನೇರ ನೇಮಕಾತಿ ಮತ್ತು ಪದೋನ್ನತಿ ಎಂಬ ನೇಮಕಾತಿ ವಿಧಾನಗಳನ್ನು ಕಲ್ಪಿಸಲಾಗಿರುತ್ತದೆ. ಆದರೆ, ಪದೋನ್ನತಿ ಅವಕಾಶದಲ್ಲಿ ಬೇರೆ ಇಲಾಖೆಯ ಅಂದರೆ, ಬೇರೆ ಜೇಷ್ಠತಾ ಘಟಕದ ಪ್ರೌಢ ಶಿಕ್ಷಣ ಇಲಾಖೆಯ ಶಿಕ್ಷಕರುಗಳಿಗೆ ಪದೋನ್ನತಿ ಎಂದು ನಮೂದಿಸಿರುವುದು ಮೂಲ ಸಮಸ್ಯೆಗೆ ಕಾರಣವಾಗಿರುತ್ತದೆ. ಏಕೆಂದರೆ, ಇದನ್ನು ಪದೋನ್ನತಿ ಎಂದು ಪರಿಗಣಿಸಿದಲ್ಲಿ, ಈ ಮೇಲೆ ತಿಳಿಸಿದ ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಗಳು ಶಿಕ್ಷಕರುಗಳಿಗೆ ಲಭ್ಯವಾಗುವುದಿಲ್ಲ. ಬದಲಿಗೆ, ಇದನ್ನು "ಆಯ್ಕೆ ಮುಖಾಂತರ ಪದೋನ್ನತಿ (Promotion by Selection) ಎಂದು ತಿದ್ದುಪಡಿ ಮಾಡಬೇಕಾದ ಅತ್ಯಗತ್ಯತೆ ಇರುತ್ತದೆ. ಈ ರೀತಿ ಮಾಡಿದಲ್ಲಿ, ಅಂದರೆ, ಪ್ರೌಢ ಶಾಲಾ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಗೆ ಆಯ್ಕೆ ಮುಖಾಂತರ ಪದೋನ್ನತಿ ನೀಡಿದಲ್ಲಿ, ಅದು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977ರ ನಿಯಮ 17ರನ್ವಯ ಬಡ್ತಿ ಮೂಲಕ ನೇರ ನೇಮಕಾತಿ ಎಂಬ ಪರಿಕಲ್ಪನೆಯ ವ್ಯಾಪ್ತಿಗೆ ಬರುತ್ತದೆ. ಈ ರೀತಿ ಮಾಡಿದಲ್ಲಿ ಶಿಕ್ಷಕರುಗಳು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯ ಪಡೆಯಲು ಯಾವುದೇ ಬಾಧಕ ಇರುವುದಿಲ್ಲ. ಈ ರೀತಿಯ ಆಯ್ಕೆ ಮುಖಾಂತರ ಪದೋನ್ನತಿ (ಬಡ್ತಿ ಮೂಲಕ ನೇಮಕ) ಪರಿಕಲ್ಪನೆಯು ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ರಾಜ್ಯ ಸೇವೆಯಿಂದ ಅಖಿಲ ಭಾರತ ಸೇವೆಗೆ ಪದೋನ್ನತಿ ನೀಡುವಲ್ಲಿ ಪರಿಚಾಲನೆಯಲ್ಲಿರುತ್ತದೆ.

ಈ ಮೇಲೆ ತಿಳಿಸಿರುವ ನಿಯಮಗಳ ಅರ್ಥೈಸುವಿಕೆಯಲ್ಲಿನ ಹಿನ್ನೆಲೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, 2013ರ ಕ್ರಮ ಸಂಖ್ಯೆ 10ರಲ್ಲಿನ ನಮೂದಿಗೆ ಸೂಕ್ತ ತಿದ್ದುಪಡಿ ಮಾಡಿ, "ಉಪನ್ಯಾಸಕರ" ಹುದ್ದೆಯ ಭರ್ತಿಯನ್ನು "ಆಯ್ಕೆ ಮೂಲಕ ಪದೋನ್ನತಿ ವಿಧಾನದಿಂದ ಭರ್ತಿ ಮಾಡತಕ್ಕದ್ದು" ಎಂಬ ಪದಗಳನ್ನು ಸೇರ್ಪಡೆ ಮಾಡಲು ಸದರಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಜರೂರು ಸೂಕ್ತ ಕ್ರಮವಹಿಸುವಂತೆ

ಶಾಲಾ ಶಿಕ್ಷಣ ಇಲಾಖೆಯನ್ನು ಕೋರಿದೆ. ಈ ರೀತಿ ತಿದ್ದುಪಡಿ ಮಾಡಿದಲ್ಲಿ ಇದು ಪದೋನ್ನತಿ ಉಪನ್ಯಾಸಕರ ವೇತನದಲ್ಲಿನ ತಾರತಮ್ಯಕ್ಕೆ ಇರುವ ಪ್ರಮುಖ ಅಡತಡೆಯನ್ನು ನಿವಾರಿಸಿದಂತಾಗುತ್ತದೆ ಮತ್ತು ಶಿಕ್ಷಕರ ವೇತನ ಅಸಮಾನತೆಯ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗುತ್ತದೆ. ಈ ತಿದ್ದುಪಡಿಯನ್ನು ಮಾಡಿದ ಬಳಿಕ ಆರ್ಥಿಕ ಇಲಾಖೆಯು ವೇತನ ಮುಂಬಡ್ತಿ ನಿಯಮಗಳ ಕರಡು ನಿಯಮಗಳನ್ನು ಪ್ರಕಟಿಸಲು ಕ್ರಮವಹಿಸುತ್ತದೆ, ಏಕೆಂದರೆ, ಈ ನಿಯಮಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಸರ್ಕಾರದ ಈ ನಿರ್ಧಾರವು ಅಂದರೆ, ನಿಯಮಗಳ ತಿದ್ದುಪಡಿ ಮಾಡುವ ನಿರ್ಣಯವು 6ನೇ ಮತ್ತು 7ನೇ ರಾಜ್ಯ ವೇತನ ಆಯೋಗಗಳ ಶಿಫಾರಸ್ಸಿಗೆ ಅನುಗುಣವಾಗಿರುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವಲ್ಲಿ ಪದೋನ್ನತಿ ಎಂಬ ಪದಕ್ಕೆ ಪರ್ಯಾಯವಾಗಿ ಆಯ್ಕೆ ಮೂಲಕ ಪದೋನ್ನತಿ ಎಂಬ ಪದಗಳನ್ನು ಪ್ರತಿಸ್ಥಾಪಿಸಲು ಕ್ರಮವಹಿಸುವುದು. ಮುಂದುವರೆದು, ಆರ್ಥಿಕ ಇಲಾಖೆಯ ಸಲಹೆಯನ್ವಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವಲ್ಲಿ ಸರ್ಕಾರದ ದಿನಾಂಕ: 13.04.2022ರ ಸುತ್ತೋಲೆ ಸಂ: ಸಸಂಇಶಾ(ಎಂ):62/2022ರ ಕ್ರಮ ಸಂಖ್ಯೆ 6ರ ಅವಕಾಶಗಳ ಕಡೆ ಶಾಲಾ ಶಿಕ್ಷಣ ಇಲಾಖೆಯ ಆದ್ಯ ಗಮನ ಸೆಳೆಯಬಯಸುತ್ತದೆ. ಇದನ್ನು ಅನುಸರಿಸುವುದರಿಂದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೆ ತೆಗೆದುಕೊಳ್ಳುವ ಕಾಲವಿಳಂಬವು ಉಂಟಾಗುವುದಿಲ್ಲ. ಆದುದರಿಂದ, ಈ ಮೇಲೆ ಪ್ರಸ್ತಾಪಿಸಿದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಜರೂರು ತಿದ್ದುಪಡಿ ಮಾಡಲು ಅಗತ್ಯ ಕ್ರಮವಹಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯನ್ನು ಮತ್ತೊಮ್ಮೆ ಕೋರಿದೆ.

ಪದೋನ್ನತಿ ಉಪನ್ಯಾಸಕರ ವೇತನ ಅಸಮಾನತೆಯ ಪ್ರಸ್ತಾವನೆಯನ್ನು ಪರಿಶೀಲಿಸುವಲ್ಲಿ, ಪದೋನ್ನತಿ ಶಿಕ್ಷಕರ ವೇತನ ಅಸಮಾನತೆಗೆ ಈ ಮೇಲೆ ತಿಳಿಸಿರುವಂತೆ ನಿಯಮಗಳ ಅವಕಾಶಗಳು ಒಂದು ರೀತಿಯಲ್ಲಿ ಕಾರಣವಾದರೆ, ಇದಕ್ಕೆ ಸೇರ್ಪಡೆಗೊಂಡಂತೆ ಶಿಕ್ಷಕರ ವೇತನ ನಿಗದಿಯಲ್ಲಿನ ನಿಯಮಗಳಿಗೆ ವ್ಯತಿರಿಕ್ತವಾದ ಅಸಮರ್ಪಕ ನಿರ್ಧಾರಗಳೂ ಸಹ ಕಾರಣವಾಗಿರುತ್ತವೆ. ಶಿಕ್ಷಕರುಗಳ ವೇತನ ನಿಗದಿಯಲ್ಲಿ/ವೇತನ ಏತ್ತರಿಕೆ ನೀಡಿ ವೇತನ ನಿಗದಿಪಡಿಸುವಲ್ಲಿ ಕೈಗೊಳ್ಳುವ ಅಸಮರ್ಪಕ ನಿರ್ಧಾರಗಳೂ ಕೂಡ ಶಿಕ್ಷಕರ ವೇತನ ಅಸಮಾನತೆಗೆ ಕಾರಣವಾಗಿ ಪದೋನ್ನತಿ ಶಿಕ್ಷಕರ ವೇತನದ ಮೊತ್ತದಲ್ಲಿ ಗಣನೀಯ ಇಳಿಕೆಯಾಗಲು ಕಾರಣವಾಗಿರುತ್ತದೆ. ಆದುದರಿಂದ, ಮೊದಲಿಗೆ ಈ ರೀತಿಯ ಅಸಮರ್ಪಕ ವೇತನ ನಿಗದಿಗಳನ್ನು ಈ ಕೆಳಕಂಡ ಪ್ರಕರಣಗಳಲ್ಲಿನ ದೃಷ್ಟಾಂತಗಳ ಬೆಳಕಿನಲ್ಲಿ ಪರಿಶೀಲಿಸಿ

ಇಂತಹುದೇ ಸಮಾನಾಂತರ ಪ್ರಕರಣಗಳಲ್ಲಿನ ಪದೋನ್ನತಿ ಉಪನ್ಯಾಸಕರುಗಳ ವೇತನವನ್ನು ಪುನರ್ ನಿಗದಿಪಡಿಸಿದಲ್ಲಿ ಶಿಕ್ಷಕರುಗಳ ವೇತನ ಅಸಮಾನತೆಯ ಪ್ರಮಾಣವು ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆ. ಇದು ಶಿಕ್ಷಕರ ಅಸಮಾಧಾನವನ್ನೂ ಸಹ ಕಡಿಮೆ ಮಾಡುತ್ತದೆ ಎಂದು ಆರ್ಥಿಕ ಇಲಾಖೆಯು ಭಾವಿಸುತ್ತದೆ.

ಪ್ರಕರಣ-1:

ಪ್ರಸ್ತಾವನೆಯಲ್ಲಿ ತಿಳಿಸಿರುವ ಹಿರಿಯ ಮತ್ತು ಕಿರಿಯ ಉಪನ್ಯಾಸಕ/ಶಿಕ್ಷಕರುಗಳ ವೇತನ ವಿವರಗಳನ್ನು ಪರಿಶೀಲಿಸಿದಾಗ ಮೊದಲಿಗೆ ಹಿರಿಯ ನೌಕರರಾದ ಶ್ರೀ ಹನುಮಂತಯ್ಯ, ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಇವರ ಪ್ರಕರಣದಲ್ಲಿ ಅವರ ವೇತನ ಅಸಮಾನತೆಯು ಮೊದಲಿಗೆ ಅವರು ನೇಮಕಗೊಂಡ ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಯಲ್ಲಿಯೇ ಕಂಡುಬರುತ್ತದೆ. ಇದು ಇವರ ಕಿರಿಯ ನೌಕರರ ಪದೋನ್ನತಿ ಸೌಲಭ್ಯ ಮಂಜೂರಾತಿಯ ನಂತರ ಮತ್ತಷ್ಟು ಹೆಚ್ಚಳವಾಗಿರುತ್ತದೆ. ಆದುದರಿಂದ, ಹಿರಿಯ ನೌಕರರಾದ ಶ್ರೀ ಹನುಮಂತಯ್ಯ, ಪ್ರಸ್ತುತ ಪದವಿ ಪೂರ್ವ ಕಾಲೇಜು ಉಪನ್ಯಾಸಕರು ಇವರ ಪ್ರೌಢ ಶಾಲಾ ಸಹ ಶಿಕ್ಷಕ ವೃಂದದ ಹುದ್ದೆಯ ವೇತನವನ್ನು ಸೇವಾ ಜೇಷ್ಠತೆಯಲ್ಲಿ ಇವರಿಗಿಂತ ಕಿರಿಯರಾದ ಶ್ರೀ ಡಿ.ಎಸ್.ಪುಟ್ಟರಾಜು, ಸಹ ಶಿಕ್ಷಕರು ಇವರ ವೇತನದ ಸಮಕ್ಕೆ ಕ.ನಾ.ಸೇ. (ಪರಿಷ್ಕೃತ ವೇತನ) ನಿಯಮಗಳು, 1999ರ ನಿಯಮ 7ರ ಅವಕಾಶಗಳನ್ವಯ ಮೊದಲಿಗೆ ದಿನಾಂಕ: 01.05.1999 ರಿಂದ ಜಾರಿಗೆ ಬರುವಂತೆ ಎತ್ತರಿಸಿ ಪುನರ್ ನಿಗದಿಪಡಿಸಿ ಅನಂತರ ಅವರ ನಂತರದ ವೇತನ ನಿಗದಿಯನ್ನು ನಿಯಮಾನುಸಾರ ಕ್ರಮಬದ್ಧಗೊಳಿಸುವುದು.

ಪ್ರಕರಣ-2:

ಪ್ರಸ್ತಾವನೆಯಲ್ಲಿ ತಿಳಿಸಿರುವ ಮತ್ತೊರ್ವ ಹಿರಿಯ ನೌಕರರಾದ ಶ್ರೀ ಹೆಚ್.ಆರ್. ರವಿಕುಮಾರ್‌ರವರು ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಗೆ ಮೊದಲಿಗೆ ದಿನಾಂಕ: 14.09.1994ರಂದು ನೇಮಕಗೊಂಡಿದ್ದು, ಅವರಿಗಿಂತ ಸೇವಾ ಜೇಷ್ಠತೆಯಲ್ಲಿ ಕಿರಿಯವರಾದ ಶ್ರೀ ಡಿ.ಚಂದ್ರಶೇಖರ್ ಇವರು ದಿನಾಂಕ: 09.05.1996ರಂದು ಸದರಿ ಹುದ್ದೆಗೆ ನೇಮಕಗೊಂಡಿರುತ್ತಾರೆ. ಹಿರಿಯ ನೌಕರರು 2007ರ ಪರಿಷ್ಕೃತ ವೇತನ ಶ್ರೇಣಿಯ ಜಾರಿಗೂ ಪೂರ್ವದಲ್ಲಿಯೇ, ದಿನಾಂಕ: 14.09.2004ರಂದು 10 ವರ್ಷಗಳ ಸೇವೆಗಾಗಿ ಕಾಲಬದ್ಧ ಮುಂಬಡ್ತಿ ಸೌಲಭ್ಯವನ್ನು ಪಡೆದಿರುತ್ತಾರೆ ಮತ್ತು ನಂತರದಲ್ಲಿ ದಿನಾಂಕ: 28.08.2007ರಂದು ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ಪಡೆದಿರುತ್ತಾರೆ. ಅದೇ ಸೇವಾ ಜೇಷ್ಠತೆಯಲ್ಲಿ

ಕಿರಿಯರಾದ ನೌಕರರು 2007ರ ಪರಿಷ್ಕೃತ ವೇತನ ಶ್ರೇಣಿಯ ಜಾರಿಯ ನಂತರದಲ್ಲಿ ದಿನಾಂಕ: 09.05.2006ಕ್ಕೆ 10 ವರ್ಷಗಳ ಸೇವೆಗಾಗಿ ಕಾಲಬದ್ಧ ಮುಂಬಡ್ತಿಯನ್ನು ಪಡೆದು ಈ ದಿನಾಂಕದ ನಂತರ ಹಿರಿಯ ನೌಕರರಿಗಿಂತ ಹೆಚ್ಚಿನ ಮೂಲ ವೇತನ ಪಡೆಯಲು ಪ್ರಾರಂಭಿಸಿರುತ್ತಾರೆ. ಆದ್ದುದರಿಂದ, ಹಿರಿಯ ನೌಕರರಾದ ಶ್ರೀ ಹೆಚ್.ಆರ್. ರವಿಕುಮಾರ್ ಇವರ ವೇತನವನ್ನು ದಿನಾಂಕ: 09.05.2006ರಿಂದ ಅನ್ವಯವಾಗುವಂತೆ, ಸೇವಾ ಜ್ಯೇಷ್ಠತೆಯಲ್ಲಿ ಅವರಿಗಿಂತ ಕಿರಿಯವರಾದ ಶ್ರೀ ಡಿ. ಚಂದ್ರಶೇಖರ್ ಇವರ ವೇತನದ ಸಮಕ್ಕೆ ಕ.ನಾ.ಸೇ. (ಪರಿಷ್ಕೃತ ವೇತನ) ನಿಯಮಗಳು, 2007ರ ನಿಯಮ 7(8)ರ ಅವಕಾಶಗಳನ್ವಯ ಪರಿಶೀಲಿಸಿ ಎತ್ತರಿಸತಕ್ಕದ್ದು. ಆನಂತರ, ಹಿರಿಯರ ವೇತನ ನಿಗದಿಯನ್ನು ನಿಯಮಾನುಸಾರ ಕ್ರಮಬದ್ಧಗೊಳಿಸುವುದು. ಪ್ರಸ್ತಾವನೆಯಲ್ಲಿ ತಿಳಿಸಿರುವ ಇತರೆ ಹಿರಿಯ ನೌಕರರಾದ ಶ್ರೀಮತಿ ಉಮಾದೇವಿ ಮತ್ತು ಶ್ರೀ ಚಂದ್ರಮೌಳಿ.ಬಿ.ಪಿ. ಇವರ ಪ್ರಕರಣದಲ್ಲಿಯೂ ಸಹ ಈ ಮೇಲಿನಂತೆಯೇ ಕ್ರಮವಹಿಸುವುದು.

ಪ್ರಕರಣ-3:

ಪ್ರಸ್ತಾವನೆಯಲ್ಲಿ ತಿಳಿಸಿರುವ ಮತ್ತೊಬ್ಬ ಹಿರಿಯ ನೌಕರರಾದ ಶ್ರೀ ತಿಪ್ಪೇಸ್ವಾಮಿ ಇವರ ವೇತನವೂ ಸಹ ಸೇವಾ ಜ್ಯೇಷ್ಠತೆಯಲ್ಲಿ ಅವರಿಗಿಂತ ಕಿರಿಯವರಾದ ಶ್ರೀ ಡಿ. ಚಂದ್ರಶೇಖರ್ ಇವರ ವೇತನಕ್ಕಿಂತ ಕಡಿಮೆ ನಿಗದಿಯಾಗಿರುವುದರಿಂದ ಅವರ ವೇತನವನ್ನೂ ಸಹ ಈ ಮೇಲಿನ ಪ್ರಕರಣ- 2 ರಲ್ಲಿ ತಿಳಿಸಿರುವಂತೆ ಪರಿಗಣಿಸಿ ಎತ್ತರಿಸಲು ನಿಯಮಾನುಸಾರ ಕ್ರಮವಹಿಸುವುದು.

ಪದೋನ್ನತಿ ಹೊಂದಿದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೇತನದಲ್ಲಿನ ತಾರತಮ್ಯಕ್ಕೆ ಮೂಲ ಕಾರಣಗಳನ್ನು ತಜ್ಞ ಸಮಿತಿಗಳಾದ 6ನೇ ರಾಜ್ಯ ವೇತನ ಆಯೋಗ ಮತ್ತು 7ನೇ ರಾಜ್ಯ ವೇತನ ಆಯೋಗಗಳು ಪರಿಶೀಲಿಸಿ ಇದನ್ನು ನಿವಾರಿಸಲು ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲು ಅಥವಾ ನಿಯಮಗಳನ್ನು ರಚಿಸಲು ಶಿಫಾರಸ್ಸು ಮಾಡಿರುತ್ತದೆ. ಬಡ್ತಿ ಶಿಕ್ಷಕರ ವೇತನ ಅಸಮಾನತೆಯು ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದು, ಶಿಕ್ಷಕರ ಅಸಮಾಧಾನಕ್ಕೆ ಕಾರಣವಾಗಿರುತ್ತದೆ. ಆದುದರಿಂದ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಪದೋನ್ನತಿ ಉಪನ್ಯಾಸಕರ (ಶಿಕ್ಷಕರ) ವೇತನ ಅಸಮಾನತೆಗೆ ಮೂಲ ಕಾರಣವಾಗಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಅವಕಾಶವನ್ನು ಈ ಮೇಲೆ ತಿಳಿಸಿರುವಂತೆ ತಿದ್ದುಪಡಿ ಮಾಡಲು ಜರೂರು ಕ್ರಮವಹಿಸುವಂತೆ ಶಿಕ್ಷಣ ಇಲಾಖೆಯನ್ನು ಪುನ: ಕೋರಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗೂ ಮೊದಲು ಶಿಕ್ಷಕರ ವೇತನ ನಿಗದಿಯಲ್ಲಿನ ತಪ್ಪುಗಳನ್ನು ಈ ಮೇಲಿನ ಪ್ರಕರಣಗಳಲ್ಲಿನ ದೃಷ್ಟಾಂತಗಳಡಿ

-7

ಪರಿಶೀಲಿಸಿ ಇದೇ ರೀತಿಯ ಇತರ ಶಿಕ್ಷಕರ ವೇತನ ನಿಗದಿಯಲ್ಲಿನ ತಪ್ಪುಗಳನ್ನು ಸರಿಪಡಿಸಲು ಮೊದಲಿಗೆ ಕ್ರಮವಹಿಸತಕ್ಕದ್ದು.

ಈ ಮೇಲೆ ತಿಳಿಸಿದಂತೆ, ವೇತನ ಮುಂಬಡ್ತಿ ಮತ್ತು ಹೆಚ್ಚುವರಿ ವೇತನ ಬಡ್ತಿ ನಿಯಮ/ಆದೇಶಗಳನ್ನು ಪುನರ್ ಪರಿಶೀಲಿಸಿ ಪರಿಷ್ಕೃತ ನಿಯಮಗಳ ರಚನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುವುದರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಈ ಮೇಲೆ ತಿಳಿಸಿದಂತೆ ತಿದ್ದುಪಡಿ ಮಾಡಲು ಮಾನ್ಯ ಶಾಲಾ ಶಿಕ್ಷಣ ಸಚಿವರ ಅನುಮೋದನೆ ಪಡೆದು ಕ್ರಮವಹಿಸುವಂತೆ ಕೋರಿದೆ. ಕೈಗೊಂಡ ಕ್ರಮದ ಬಗ್ಗೆ ಆರ್ಥಿಕ ಇಲಾಖೆಗೆ ಮಾಹಿತಿ ಒದಗಿಸುವಂತೆಯೂ ಸಹ ಕೋರಿದೆ".

ಹಾಗೂ, ಸದರಿ ಇಲಾಖೆಯು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವಲ್ಲಿ "ಪದೋನ್ನತಿ" ಎಂಬ ಪದಕ್ಕೆ ಪರ್ಯಾಯವಾಗಿ "ಆಯ್ಕೆ ಮೂಲಕ ಪದೋನ್ನತಿ" ಎಂಬ ಪದಗಳನ್ನು ಪ್ರತಿಸ್ಥಾಪಿಸಲು ಸಹಮತಿ ನೀಡಿದ್ದು, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವಲ್ಲಿ ಸರ್ಕಾರದ ದಿನಾಂಕ:13.04.2022 ರ ಸುತ್ತೋಲೆ ಸಂ: ಸಸಂಶಾ(ಎಂ):62/2022ರ ಕ್ರಮ ಸಂಖ್ಯೆ:6 ರಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಜರೂರು ತಿದ್ದುಪಡಿ ಮಾಡಲು ಅಗತ್ಯ ಕ್ರಮವಹಿಸುವಂತೆ ಅಭಿಪ್ರಾಯ ನೀಡಲಾಗುತ್ತದೆ.

ಮುಂದುವರೆದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ದಿನಾಂಕ 22.06.2026 ರ ಅಭಿಪ್ರಾಯವು ಈ ಕೆಳಕಂಡಂತಿದೆ.

"ಪ್ರೌಢಶಾಲೆಯಿಂದ ಪದವಿ ಪೂರ್ವ ಕಾಲೇಜುಗಳಿಗೆ ಉಪನ್ಯಾಸಕರ ವೃಂದದ ಹುದ್ದೆಗೆ ಪದೋನ್ನತಿ ಹೊಂದಿದ ಸರ್ಕಾರಿ ಶಾಲಾ ಶಿಕ್ಷಕರುಗಳು ಹಾಗೂ 10, 15, 20, 25 ಮತ್ತು 30 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ ಸೌಲಭ್ಯಗಳನ್ನು ಪಡೆದಿರುವ ಸಹಶಿಕ್ಷಕರುಗಳ /ಮುಖ್ಯೋಪಾಧ್ಯಾಯರು ಹೆಚ್ಚಿನ ಮೂಲ ವೇತನವನ್ನು ಹೊಂದಿದ್ದು, ಇದನ್ನು ಸರಿದೂಗಿಸುವ ನಿಟ್ಟಿನಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಕುರಿತು ಅಭಿಪ್ರಾಯ ಕೋರಲಾಗಿದೆ.

2. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 3 (2) ರಲ್ಲಿ ಕೆಳಕಂಡಂತೆ ಉಪಬಂಧಿಸಲಾಗಿದೆ.

3. "Method of Recruitment"

-52-

(2) Notwithstanding anything contained in these rules or in the rules of recruitment specially made in respect of any service or post: -

